# ಕನ್ನಡ ತಿಪಿಟಕ ಕೈಪಿಡಿ

@ ಬುದ್ಧ ವಚನ ಟ್ರಸ್ಟ್
ಎಲ್ಲಾ ಹಕ್ಕುಗಳು ಕಾಯ್ದಿರಿಸಿದೆ

ಕನ್ನಡ ಅನುವಾದ ಮತ್ತು ಪ್ರಕಾಶನ :
**ಮಹಾ ಬೋಧಿ ಸೊಸೈಟಿ**
**ಬುದ್ಧ ವಚನ ಟ್ರಸ್ಟ್**
14, ಕಾಳಿದಾಸ ಮಾರ್ಗ
ಗಾಂಧಿನಗರ, ಬೆಂಗಳೂರು-560 009
ದೂರವಾಣಿ : 080-41148440
E-mail : bvtbooks@gmail.com
Website : www.mahabodhi.info

© ಬುದ್ಧ ವಚನ ಟ್ರಸ್ಟ್ 2023

ಮುದ್ರಕರು:
**ಲಕ್ಷ್ಮೀ ಕ್ರಿಯೇಷನ್ಸ್**
ಕಾಟನ್‌ಪೇಟ್, ಬೆಂಗಳೂರು-560 053
ದೂರವಾಣಿ: 080-41116613 ಮೊಬೈಲ್: 9739856236

# ಪ್ರಸ್ತಾವನೆ – ಆಶಯ ನುಡಿಗಳು

ತಿಪಿಟಕವು ಪವಿತ್ರ ಬೌದ್ಧ ಧರ್ಮ ಗ್ರಂಥ. ಇದರಲ್ಲಿ ಭಗವಾನ್ ಬುದ್ಧರು ಪಾಳಿ ಭಾಷೆಯಲ್ಲಿ ಬೋಧಿಸಿದ ಧಮ್ಮ ಎಂದರೆ ಅಧಿಕೃತ ಉಪದೇಶಗಳು ಒಳಗೊಂಡಿವೆ. ಹೀಗೆ ತಿಪಿಟಕದಲ್ಲಿ ಸಮ್ಮಾಸಂಬುದ್ಧ ಬುದ್ಧರು ಬೋಧಿಸಿದ ಮೂಲ ಉಪದೇಶಗಳು ಮುಕ್ಕಾಗದೆ ಪಾವಿತ್ರ್ಯವನ್ನು ಕಳೆದುಕೊಳ್ಳದೆ ಹಾಗೆಯೇ ಉಳಿದುಕೊಂಡು ಬಂದಿವೆ. ಭಗವಾನ್ ಬುದ್ಧರು ನಲವತ್ತೈದು ವರ್ಷಗಳ ಕಾಲ ಧಮ್ಮವನ್ನು ಜನರಾಡುತ್ತಿದ್ದ ಭಾಷೆಯಲ್ಲಿ ಪರಮ ಕರುಣೆಯಿಂದ ಬೋಧಿಸಿದ್ದಾರೆ. ಪುರೋಹಿತ ಕುಲದ ಹಿನ್ನೆಲೆಯಿಂದ ಬಂದ ಒಬ್ಬ ವಿದ್ವಾಂಸನಾದ ಭಿಕ್ಖು ಭಗವಾನ್ ಬುದ್ಧರ ಬಳಿ ಬಂದು ತಾನು ಧಮ್ಮವನ್ನು ವೇದ ಛಂದಸ್ಸಿನಲ್ಲಿ ಅಳವಡಿಸುವುದಕ್ಕೆ ಅನುಮತಿ ಕೇಳಿದಾಗ ಬುದ್ಧರು: "ತಥಾಗತರು ಧಮ್ಮವನ್ನು ಎಲ್ಲ ಜನರ ಒಳಿತಿಗಾಗಿ ಹೇಳುತ್ತಾರೆ, ಕೇವಲ ಸಮಾಜದ ಒಂದು ಭಾಗದವರಿಗಲ್ಲ" ಎಂದು ಹೇಳಿದರು.

ಭಗವಾನರು ಬೋಧಿ ಜ್ಞಾನವನ್ನು ಅರ್ಹತರಾದ ಮೊದಲ ಅರವತ್ತು ಭಿಕ್ಖುಗಳಿಗೆ ನೀಡಿದ ಸಿಂಹ ಕರೆ ಹೀಗಿದೆ: "ಚರಥ, ಭಿಕ್ಖವೆ, ಚಾರಿಕಂ, ಬಹುಜನ ಹಿತಾಯ ಬಹುಜನ ಸುಖಾಯ ಲೋಕಾನುಕಂಪಾಯ ಅತ್ಥಾಯ ಹಿತಾಯ ಸುಖಾಯ ದೇವಮನುಸ್ಸಾಂ ಮಾ ಏಕೇನ ದ್ವೇ ಆಗಮಿತ್ಥಾ. ದೇಸೇಥ ಭಿಕ್ಖವೇ ಧಮ್ಮಂ ಆದಿಕಲ್ಯಾಣಂ, ಮಜ್ಝೇ ಕಲ್ಯಾಣಂ ಪರಿಯೋಸಾನ ಕಲ್ಯಾಣಂ ಸಾತ್ಥಂ ಸಬ್ಯ್ಸಂಜನಮ್ ಕೇವಲ ಪರಿಪುಣ್ಣಂ ಪರಿಸುದ್ಧಂ ಬ್ರಹ್ಮಚರಿಯಂ ಪಕಾಸೇಥ."

"ಭಿಕ್ಖುಗಳೇ, ಮುಂದೆ ನಡೆಯಿರಿ, ಬಹುಜನ ಹಿತಕ್ಕಾಗಿ, ಬಹುಜನ ಸುಖಕ್ಕಾಗಿ, ಲೋಕಾನುಕಂಪದಿಂದ ಜನರ, ದೇವತೆಗಳ ಹಿತಕ್ಕಾಗಿ ಸುಖಕ್ಕಾಗಿ ಚಲಿಸಿರಿ. ಇಬ್ಬರು ಒಟ್ಟಾಗಿ ಒಂದೇ ಮಾರ್ಗದಲ್ಲಿ ಹೋಗದಿರಿ. ಭಿಕ್ಖುಗಳೇ ಆದಿಯಲ್ಲಿ, ಮಧ್ಯದಲ್ಲಿ ಮತ್ತು ಅಂತ್ಯದಲ್ಲಿ ಹೀಗೆ ಎಲ್ಲ ಹಂತಗಳಲ್ಲಿ ಕಲ್ಯಾಣವನ್ನು ನೀಡುವ ಧಮ್ಮವನ್ನು ಮಾತಿನಲ್ಲಿ ಕೃತಿಯಲ್ಲಿ ಬೋಧಿಸಿರಿ. ಪರಿಪೂರ್ಣವೂ, ಪರಿಶುದ್ಧವೂ ಆದ ಬ್ರಹ್ಮಚರಿಯ ಜೀವನವು ಪ್ರಕಾಶಿಸುವಂತಾಗಲಿ."

ಒಂದುವೇಳೆ ಬುದ್ಧರು ವಿದ್ವಾಂಸ ಭಿಕ್ಖುವಿನ ಮಾತನ್ನು ಪರಿಗಣಿಸಿದ್ದರೆ ಧಮ್ಮವು ಆಗ ಕೇವಲ ವಿದ್ವಾಂಸರ, ಪುರೋಹಿತರ ಸಣ್ಣ ಗುಂಪಿಗೆ ಮಾತ್ರ ಸೀಮಿತವಾಗಿ ಅದು ಅವರ ಸಂತತಿಗೆ ಮಾತ್ರ ದೊರೆಯುತ್ತಿತ್ತು. ಕೇವಲ ಪ್ರತಿಷ್ಠಿತ ವಿದ್ವಾಂಸರು ಮತ್ತು ಉನ್ನತವರ್ಗದವರಿಗೆ ಮಾತ್ರ ಈ ಧಮ್ಮದ ಅರಿವು ಸೀಮಿತವಾಗಿದ್ದರೆ ಜಾತಿ ಮತ ಸಂಪತ್ತುಗಳ ಎಲ್ಲೆಯಿಲ್ಲದ ಎಲ್ಲರಿಗೆ ಈ ಧಮ್ಮವು ಸಿಗಬೇಕೆಂಬ ಆಶಯವೇ ಹಾಳಾಗುತ್ತಿತ್ತು. ಈ ಕಾರಣಕ್ಕಾಗಿಯೇ ತಿಪಿಟಕವು ಮೂಲ ಪಾಳಿಯಲ್ಲಿಯೇ ಅಂದರೆ ಅಂದು ಬುದ್ಧರ ಕಾಲದ ಜನರಾಡುತ್ತಿದ್ದ ಭಾಷೆಯಲ್ಲಿಯೇ ಇದೆ.

ಭಾರತದ ಪ್ರಾಚೀನ ಶಾಸ್ತ್ರೀಯ ಭಾಷೆಗಳು ಮೂರು. ಅದರಲ್ಲಿ ಪಾಳಿಯೇ ಅತ್ಯಂತ ಹಳೆಯದು. ಈ ಮೂರು ಯಾವುವೆಂದರೆ: ಛಂದಸ್ ಅಥವಾ ವೈದಿಕ ಸಂಸ್ಕೃತ, ಪ್ರಾಕೃತ ಮತ್ತು ಪಾಳಿ.

1. ಛಂದಸ್ ಅನ್ನು ವೈದಿಕ ಸಂಸ್ಕೃತವೆಂದು ಕರೆಯುತ್ತಾರೆ. ಅದು ಪರಿಷ್ಕರಗೊಂಡ ಮೇಲೆ ಅದು ಶಾಸ್ತ್ರೀಯ ಸಂಸ್ಕೃತವಾಗಿ ಪರಿಗಣಿತವಾಯಿತು.

2. ಪ್ರಾಕೃತ – ಇದು ಜನಸಾಮಾನ್ಯರ ಆಡುಭಾಷೆ, ಇದರಲ್ಲಿ ಭಿನ್ನ ಭಿನ್ನವಾದ ಆಡು ನುಡಿಗಳಿವೆ. ಈಗಲೂ ಇದನ್ನು ಮಹಾವೀರ ಜೈನರ ಅನುಯಾಯಿಗಳು ಬಳಸುತ್ತಾರೆ.

3. ಪಾಳಿ – ಇದು ಮಾಗಧಿ ಪ್ರಾಕೃತ್ ಎಂದೂ ಕರೆಯಲ್ಪಡುತ್ತದೆ. ಇದು ಹೆಚ್ಚಿನ ಮಟ್ಟಿಗೆ ಪ್ರಪಂಚದಾದ್ಯಂತ ಇರುವ ಥೇರವಾದಿ ಬೌದ್ಧರು ಬಳಸುತ್ತಾರೆ. ಭಗವಾನ್ ಬುದ್ಧರು ಜನರ ಭಾಷೆಯಾಗಿದ್ದ ಪಾಳಿ ಅಥವಾ ಮಾಗಧಿ ಪ್ರಾಕೃತ ಭಾಷೆಯನ್ನು ತಮ್ಮ ಧಮ್ಮೋಪದೇಶಗಳಲ್ಲಿ ಬಳಸಿದ ಉದ್ದೇಶವೆಂದರೆ ಜಾತಿ ಮತ ಧರ್ಮ, ಅಂತಸ್ತುಗಳ ಬೇಧವಿಲ್ಲದೆ ಸಮಾಜದ ಎಲ್ಲ ಸ್ಥರದ ಜನರು ಉಪಯೋಗ ಪಡೆಯಲೆಂಬುದೇ ಆಗಿತ್ತು. ಬುದ್ಧನ ಕಾಲದಲ್ಲಿ ಎಲ್ಲ ಧಾರ್ಮಿಕ ಕಾರ್ಯಗಳು ಪೌರೋಹಿತ್ಯ ಬ್ರಾಹ್ಮಣರ ಛಂದಸ್ಸಿನಲ್ಲೇ ನಡೆಯುತ್ತಿದ್ದವು. ಸಾಮಾನ್ಯ ಜನರಿಗೆ ಛಂದಸ್ಸನ್ನು ಅರಿಯುವ ಅವಕಾಶವೇ ಇರಲಿಲ್ಲ. ಜನಪದರ ಆಗಿನ ಭಾಷೆ ಮಾಧ್ಯಮ ಬೇರೆ ಬೇರೆ ಆಡುನುಡಿಗಳ ಪ್ರಾಕೃತವೇ ಆಗಿತ್ತು.

ಪಾಳಿಯನ್ನು ಮಾಗಧಿ ಪ್ರಾಕೃತವೆಂದು ಕರೆಯುತ್ತಾರೆ. ಇದು ಈಗಲೂ ಚಾಲ್ತಿಯಲ್ಲಿದೆ. ಪ್ರಾಕೃತವಾಗಿ (ಸಹಜವಾಗಿ) ಮಾತನಾಡುವುದೇ ಪ್ರಾಕೃತಿ (ಪ್ರಕೃತಿೀಯ ಭಾಸತಿ ಪ್ರಾಕೃತ). ಭಾರತ ಭೂಖಂಡವು ಬಹು ಜಾತಿಯ ಬಹು ಸಂಸ್ಕೃತಿಯ, ಬಹುಭಾಷೆಯ ದೇಶವಾಗಿದ್ದು ಸರ್ವ ಸಂಪರ್ಕ ಭಾಷೆಯೊಂದು ಇದ್ದೇ ಇದೆ. ಹೀಗೆ ಮೂರು ಭಿನ್ನರೀತಿಯ ಪ್ರಾಕೃತ ಭಾಷೆಗಳಿವೆ. ಮಾಗಧಿ ಪ್ರಾಕೃತ, ಸೌರಸೇನಿ ಪ್ರಾಕೃತ ಮತ್ತು ಮಹಾರಾಷ್ಟ್ರ ಪ್ರಾಕೃತ. ಇಂದು ಹಿಂದಿ ಹೇಗೆ ವ್ಯಾಪಕವಾಗಿ ಬಳಕೆಯಲ್ಲಿದೆಯೋ ಹಾಗೆ ಎಲ್ಲರ ಮಾಧ್ಯಮವಾಗಿ ಹಿಂದಿನ ದಿನಗಳಲ್ಲಿ ಯಾವುದಕ್ಕೂ ಕಡಿಮೆ ಇಲ್ಲದೆ ಪ್ರಾಕೃತವು ಶ್ರೀಮಂತವಾಗಿ ಬಳಕೆಯಲ್ಲಿತ್ತು. ಇಂದು ಹಿಂದಿಯು ಹೇಗೆ ಸರ್ವತ್ರ ವ್ಯಾಪಿಯಾಗಿ ಇದೆಯೋ ಅದೇರೀತಿಯಲ್ಲಿ ಪಾಳಿಯು ಅಂದು ಇತ್ತು.

ಬುದ್ಧನ ಧಮ್ಮೋಪದೇಶಗಳು ಆತ ಹುಟ್ಟಿದ ನಾಡಲ್ಲೇ ಕಳೆಗುಂದುತ್ತಾಬಂದಂತೆ ಪಾಳಿಯೂ ಕೂಡ ಇಂದು ಭಾರತದಲ್ಲಿ ಪ್ರಸಿದ್ಧವಾಗಿಲ್ಲ. ಒಂದುಕಾಲಕ್ಕೆ ಪಾಳಿ ಎಲ್ಲರ ಭಾಷೆಯಾಗಿ ವಿಶೇಷವಾಗಿ ಮಜ್ಝಿಮ ದೇಶದ ವ್ಯಾಪ್ತಿಯಲ್ಲಿ ಬರುವ ಈಗಿನ ಬಿಹಾರ, ಉತ್ತರ ಪ್ರದೇಶ, ದೆಹಲಿ, ಹರಿಯಾಣ, ರಾಜಸ್ಥಾನ, ಮಧ್ಯಪ್ರದೇಶದ ಕೆಲವು ಭಾಗಗಳು, ಒಡಿಶಾ, ಬಂಗಾಳಿ, ಅಸ್ಸಾಂ ರಾಜ್ಯಗಳ ಜನರ ಸಾಹಿತ್ಯಕ ಭಾಷೆಯಾಗಿತ್ತು. ಈ ಭೂಭಾಗದಲ್ಲಿರುವ ಜನರೆಲ್ಲ ಪಾಳಿ ಭಾಷೆಯನ್ನು ಮಾತನಾಡುತ್ತಿದ್ದರು. ಯಾವ ಪ್ರಾಕೃತ ಮತ್ತು ಪಾಳಿ ಭಾಷೆಗಳು ಅಂದು ಯಾವ ಉಛ್ರಾಯ ಸ್ಥಿತಿಯಲ್ಲಿದ್ದವೋ ಇಂದು ಆ ಸ್ಥಾನವನ್ನು ಶಾಸ್ತ್ರೀಯ ಸಂಸ್ಕೃತವು ಪಡೆದಿದೆ. ಕಾರಣ ಸಂಸ್ಕೃತ ಭಾಷೆಯ ನಾವೀನ್ಯತೆ ಮತ್ತು ಅದಕ್ಕೆ ಸಿಕ್ಕ ವ್ಯಾಪಕ ಪ್ರಚಾರ. ಸಂಸ್ಕೃತವು ಕೇವಲ ಭಾರತದಲ್ಲಷ್ಟೇ ಅಲ್ಲ, ಪ್ರಪಂಚದ ಎಲ್ಲೆಡೆ ಗೊತ್ತಿರುವಂತಹ ಭಾಷೆ.

ಈ ರೀತಿಯ ಶ್ರೀಮಂತಿಕೆ ಮತ್ತು ವಿಸ್ತಾರಕ್ಕೆ ಮಹಾಯಾನ ಬೌದ್ಧ ಧರ್ಮವೂ ಹೆಚ್ಚಿನ ಕೊಡುಗೆಯನ್ನೇ ನೀಡಿದೆ. ಬೌದ್ಧ ಸಂಸ್ಕೃತದ ಹಲವಾರು ರೂಪಗಳು ಎಂದರೆ ಹೈಬ್ರಿಡ್ ಸಂಸ್ಕೃತ, ಪಾಳೀಕೃತ ಸಂಸ್ಕೃತ ಇತ್ಯಾದಿ. ಈ ಬೆಳವಣಿಗೆಗೆ ಋಣಾತ್ಮಕ ಅಂಶವೂ ಇದೆ ಎಂಬುದನ್ನು ತಿಳಿಯಬೇಕು. ಸಂಸ್ಕೃತದ ಬೆನ್ನ ಹಿಂದೆ ಹೋದ ಪೌರಾತ್ಯ ವಿದ್ವಾಂಸರು ಪಾಳಿ ಮತ್ತು ಪ್ರಾಕೃತಗಳನ್ನು ಕಡೆಗಣಿಸಿದ್ದಾರಲ್ಲದೆ ಅವಕ್ಕೆ ಮಲತಾಯಿ ಧೋರಣೆಯನ್ನು ತೋರಿದರು. ಹೇಗೆಂದರೆ ಪಾಳಿಯು ಸಂಸ್ಕೃತ ಅಧ್ಯಯನದಲ್ಲಿ ಒಂದು ಶಾಖೆಯಂತೆ ಬಿಂಬಿಸಲು ಪ್ರಯತ್ನಿಸಿದುದರಿಂದ ಈ ಸ್ಥಿತಿಯನ್ನು ವಿಶ್ವವಿದ್ಯಾಲಯ, ಕಾಲೇಜು ಮುಂತಾದ ಶೈಕ್ಷಣಿಕದಲ್ಲಿ ಇರುವುದನ್ನು ಕಾಣಬಹುದು. ಆದರೂ ಸತ್ಯವೇನೆಂದರೆ ಪಾಳಿ ಪ್ರಾಕೃತ ಮತ್ತು ಸಂಸ್ಕೃತಗಳು ಭಾರತೀಯ ಭಾಷಾ ಶಾಸ್ತ್ರಗಳಲ್ಲಿ ಅಥವಾ ಪೌರಾತ್ಯ ಅಧ್ಯಯನಗಳು ಕ್ರಮವಾಗಿ ಬರುವ ಸೋದರ ಭಾಷೆಗಳು. ಪ್ರತಿ ಭಾಷೆಗೂ ತನ್ನದೇ ಆದ ವೈಶಿಷ್ಟ್ಯತೆ ಇದೆ. ಇವೆಲ್ಲ ಸೇರಿಯೇ ಭಾರತೀಯ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಪರಂಪರೆಯನ್ನು ನಿರ್ಮಿಸುವುದು.

ಇನ್ನು ಪಾಳಿ (ಪಾಲಿ) ಅರ್ಥ ಅಥವಾ ಪಾರಿಭಾಷಿಕಕ್ಕೆ ಬಂದರೆ 'ಬುದ್ಧವಚನಂ' ಎಂದು ಸರಳವಾಗಿ ಹೇಳ ಬಹುದು ಅಥವಾ ಬುದ್ಧನ ಮಾತು ಅಥವಾ ಬುದ್ಧನ ಧಮ್ಮೋಪದೇಶಗಳನ್ನು ಒಳಗೊಂಡ ತಿಪಿಟಕದ 'ಪಾಠ' ಎಂದು.

ಶ್ರೀಲಂಕಾದಲ್ಲಿನ ಧರ್ಮಗ್ರಂಥಗಳ ಅಟ್ಠಕಥೆಯನ್ನು ಪುನರುತ್ಥಾನಗೊಳಿಸಿದ ಐದನೇ ಶತಮಾನದಲ್ಲಿದ್ದ ಭಾರತೀಯ ಬೌದ್ಧ ಸಂನ್ಯಾಸಿಯಾದ ಪರಮಪೂಜ್ಯ ಆಚಾರ್ಯ ಬುದ್ಧ ಘೋಷನು ತನ್ನ ಮಹಾಕೃತಿಯಾದ ವಿಸುದ್ಧಿ ಮಗ್ಗದ ಅನೇಕಕಡೆ 'ಇಮಾನಿ ತವ ಪಾಳಿಯಂ' ಎಂಬ ಪದ ಬಳಕೆ ಮಾಡಿದ್ದಾನೆ. ಇವು ತಿಪಿಟಕದ ಗ್ರಂಥಗಳಲ್ಲಿ 'ಅಟ್ಠಿಕಥಾಯಾಂ ಪನ' ಎಂಬುದಾಗಿ ಇವೆ. ಅವನು ಪುನಃ 'ನೇವ ಪಾಲಿಯಂ ನ ಅಟ್ಠಕಥಾಯಾಂ ಆಗತಂ' ಎಂದಿದ್ದಾನೆ. ಇದು ಗ್ರಂಥಗಳಲ್ಲಾಗಲೀ, ಅಟ್ಠಕಥೆಗಳಲ್ಲಾಗಲಿ ಬಂದಿಲ್ಲ.

ಅಟ್ಠಕಥಾ ಸಾಹಿತ್ಯವೇನಿದ್ದರೂ ನಂತರದ ಬೆಳವಣಿಗೆ. ಆದರೂ ಸಹ ಈ ಬೃಹತ್ ಸಾಹಿತ್ಯ ಫಸಲಿನಲ್ಲಿ ತಿಪಿಟಕ ಗ್ರಂಥಗಳಲ್ಲಿ ಬರುವ ಪದಬಂಧ ಒಡಪನ್ನು ಉಳಿಸಿಕೊಂಡಿದೆ. ಈ ವಿಸ್ತಾರ ಸಾಹಿತ್ಯ ಎಂದರೆ ತಿಪಿಟಕ ಗ್ರಂಥಗಳು, ಅಟ್ಠಕಥಾ ಸಾಹಿತ್ಯ, ಅನುಟೀಕಾ ಸಾಹಿತ್ಯ ಇವೆಲ್ಲವೂ 'ಪಾಳಿ ಭಾಷೆ' ಎಂದೇ ಗುರುತಿಸಲ್ಪಡುತ್ತದೆ.

ಪ್ರಸಿದ್ಧ ಪಾಳಿ ಭಾಷಾ ಗ್ರಂಥ 'ಅಭಿಧಾನಪ್ಪದೀಪಿಕಾ'ದಲ್ಲಿ ಪಾಳಿಯನ್ನು ಹೀಗೆ ಅರ್ಥೈಸಲಾಗಿದೆ. 'ಪಾಲೇತಿ ರಕ್ಖತೀತಿ ಪಾಲಿ'-ಯಾವುದು ರಕ್ಷಿಸುತ್ತದೋ, ಸಂಗ್ರಹಿಸಿಕೊಂಡು ಹೋಗುತ್ತದೋ ಅದು ಪಾಳಿ'. ಕಿಂ ರಕ್ಖತಿ? ಬುದ್ಧವಚನಾ ರಕ್ಖತಿ. ಅದು ಏನನ್ನು ರಕ್ಷಿಸುತ್ತದೆ? ಅದು ಬುದ್ಧನ ವಚನಗಳನ್ನು (ಮಾತುಗಳನ್ನು) ಪವಿತ್ರ ತಿಪಿಟಕ ಗ್ರಂಥಗಳ ರೂಪದಲ್ಲಿ ಸಂರಕ್ಷಿಸುತ್ತದೆ. ಇನ್ನೊಂದು ಪಾರಿಭಾಷಿಕ ಪದೇ ಪದೇ ತಿಪಿಟಕದಲ್ಲಿ ಬರುವುದು ಹೀಗಿದೆ.

'ಪರಿಯಾಯ ಇತಿ ಪಾಳಿ'; ಎಂದರೆ ಬುದ್ಧನ ಉಪದೇಶ ರೀತ್ಯ 'ಬುದ್ಧ ವಚನಂ'. ಇಲ್ಲೊಂದು ವಾಕ್ಯ ಹೀಗಿದೆ: 'ಕೊ ನಾಮ ಅಮಂ ಪರಿಯಾಯೋ?" 'ಪೂಜ್ಯರೇ, ಈ ಧಮ್ಮೋಪದೇಶದ ಹೆಸರೇನು?' ಪರಿಯಾಯ ಎನ್ನುವುದು ನಂತರದ ಕಾಲದಲ್ಲಿ ಪಲಿಯಾಯ ಎಂದಾಗಿರುವುದು ಅಶೋಕನ ಬಾಬ್ರಿ ಶಿಲಾಸಾಸನದಲ್ಲಿ "ಇಮಾನಿ ಭಂತೆ, ಧಮ್ಮ ಪಲಿಯಾಯಾನಿ" ಎಂದಾಗಿದೆ. [ಇವು ಪೂಜ್ಯರೆ, ಧಮ್ಮದ ಗ್ರಂಥಗಳಾಗಿವೆ]. ಇನ್ನೂ ಮುಂದೆ ಪಠ್ಯಂತರವಾಗಿ ಪಲಿಯಾಯ ಎಂಬುದು 'ಪಾಲಿ'ಯಾಗಿ ಹ್ರಸ್ವಗೊಂಡಿತು.

ಪಾಳಿ (ಪಾಲಿ)ಯನ್ನು ಪಾಳಿ ಪವಿತ್ರಗ್ರಂಥವೆಂದೂ ಕರೆಯುತ್ತಾರೆ. ಕಾರಣ ಬೌದ್ಧ ಪವಿತ್ರ ಗ್ರಂಥ ತಿಪಿಟಕವನ್ನು ಅದು ಸಂರಕ್ಷಿಸುತ್ತಾ ಬಂದಿದೆ. ಈ ಪಾಳಿ ಪವಿತ್ರ ಗ್ರಂಥವು ಗ್ರಂಥೇತರ ಸಾಹಿತ್ಯವಾದ ಅಟ್ಠಕಥೆಗಳಿಗಿಂತಲೂ ಭಿನ್ನವಾದುದು. ಅದರ ಸ್ಥಳ ಕುರಿತು ಹೇಳುವುದಾದರೆ ಮಗಧವು ಪಾಳಿಯ ಮನೆ. ಕಾರಣ ಬೌದ್ಧ ಧರ್ಮವು ಉದಯವಾದದ್ದೇ ಮಗಧ ಪ್ರಾಂತ್ಯದಲ್ಲಿ. ಮಾಗಧಿಯೊಂದಿಗೆ ಪಾಳಿ ಗುರುತಿಸಿಕೊಂಡಿರುವುದರಿಂದಲೇ 'ಸಮ್ಮಾ ಸಂಬುದ್ಧೇನ ವುತ್ತಪ್ಪಕಾರೋ ಮಾಗಧಿಕೊ ವೊಹಾರೋ'–ಸಮ್ಮಾ ಸಂಬುದ್ಧರು ಮಾಗಧಿ ಮಾಧ್ಯಮವನ್ನು ಹೇಗಿದೆಯೋ ಹಾಗೆ ಬಳಸಿದರು ಎಂದು ಹೇಳಲ್ಪಟ್ಟಿದೆ. ಪಾಳಿಯು 'ಮೂಲ ಭಾಷೆ' ಎಂಬ ಗೌರವವನ್ನು ಹೊಂದಿದೆ. ಆದ್ದರಿಂದಲೇ 'ಸಾ ಮಾಗಧಿಮೂಲ ಭಾಷಾ ಸಂಬುದ್ಧೋ ಚಾಪಿ ಭಾಸರೆ' – ವಾಸ್ತವವಾಗಿ ಮಾಗಧಿ ಮೂಲ ಭಾಷೆಯಲ್ಲೇ ಸಮ್ಮಾ ಸಂಬುದ್ಧರು ಧಮ್ಮವನ್ನು ಬೋಧಿಸಿದರು.

ಮೂಲ ಭಾಷೆಯಾದ ಮಾಗಧಿಯಲ್ಲಿ ಹಲವಾರು ಸ್ಥಳೀಯ ಆಡು ಭಾಷೆಗಳ ಮಿಳಿತಗೊಂಡಿರುವುದನ್ನು ಪಾಳಿಯಲ್ಲಿ ಕಂಡುಬಂದು ಅದು ಎಲ್ಲರೂ ಸಂವಹಿಸಬಲ್ಲ ಅಥವಾ ಮಾತನಾಡಬಲ್ಲ, ಈಗಿನ ಹಿಂದಿಯಂತೆ. ಇನ್ನು ಪಾಳಿಯ ಸ್ಥಾನಮಾನದ ಬಗ್ಗೆ ಹೇಳಬೇಕೆಂದರೆ ಕೆಲವು ಸಂಸ್ಕೃತ ಪಂಡಿತರು ಮತ್ತು ವಕ್ರಬುದ್ಧಿಯ ಪೌರಾತ್ಯ ವಿದ್ವಾಂಸರು ಪಾಳಿಯನ್ನು ಒಂದು ಪರಿಪೂರ್ಣ ಭಾಷೆಯಲ್ಲವೆಂಬಂತೆ ಅದೊಂದು ಕೇವಲ ಆಡುಭಾಷೆ ಎಂಬಂತೆ ಬಿಂಬಿಸುತ್ತಾರೆ. ಪಾಳಿಯು ಶ್ರೀಮಂತ ಸಾಹಿತ್ಯ ಪರಂಪರೆಯಿಂದ ಬಂದುದು ಮತ್ತು ಅದು ಕೇವಲ ಭಾರತವಷ್ಟೇ ಅಲ್ಲದೆ ವಿದೇಶಗಳಲ್ಲೂ ಈಗ ವ್ಯಾಪಿಸಿರುವುದನ್ನು ತಿಳಿಯಬಹುದು. ವಾಸ್ತವದಲ್ಲಿ ಪಾಳಿ ಭಾಷೆಯಲ್ಲಿ ಹೊರಬಂದ ಸಾಹಿತ್ಯ ಅದು ತಿಪಿಟಕ ಆಗಿರಬಹುದು, ವಿಸ್ತಾರವಾಗಿರುವ ಅಟ್ಠಕಥಾ, ಟೀಕಾ, ಅನುಟೀಕಾ ಇವೆಲ್ಲದರ ಫಸಲು, ಅದರಲ್ಲಿನ ಶ್ರೀಮಂತಿಕೆ, ನಾವೀನ್ಯತೆ, ನಿಖರತೆ ಇವೆಲ್ಲವೂ ಪ್ರಪಂಚದ ಯಾವುದೇ ಭಾಷೆಗೂ ಪಾಶ್ಚಿಮಾತ್ಯವಾಗಲಿ, ಪೌರಾತ್ಯವಾಗಲಿ ಕಡಿಮೆ ಇಲ್ಲದಂತೆ ಇದೆ.

ಇನ್ನು ಪಾಳಿಯ ಪರಂಪರೆಯನ್ನು ನೋಡಿದರೆ ಇದು ಮಾಗಧಿಯ ಪ್ರಾರಂಭ ರೂಪ. ಇದು ಇಂಡೋ ಆರ್ಯನ್ ಭಾಷೆ. ಆದ್ದರಿಂದ ಪಾಳಿಯು ಬುದ್ಧಪೂರ್ವವೂ ಪಾಣಿನಿಯು ಯಸ್ಕಾನನ್ನು ಆಧರಿಸಿ ಹೇಳುವುದರಿಂದ ಯಸ್ಕಪೂರ್ವವೂ ಆಗಿ ಪಾಣಿನಿಪೂರ್ವ ಭಾಷೆಯಾಗಿದೆ. ಪಾಣಿನಿಯು ಪ್ರಾಚೀನ ಸಂಸ್ಕೃತವನ್ನು ವ್ಯಾಕರಣದ ಮೂಲಕ ಉಳಿಸಿಕೊಂಡು ಬಂದವನು ಪಾಣಿನಿಯ ಕಾಲ ಕ್ರಿ.ಶ> ೫೦೦ ರಿಂದ ಕ್ರಿ.ಪೂ. ೩೦೦ ಎಂದು ಹೆಸರಾಂತ ಪಾಶ್ಚಿಮಾತ್ಯ ವೈಯಾಕರಣನಾದ ಮೆಕ್ ಡೊನಾಲ್ಡನು ಗುರುತಿಸಿದ್ದಾನೆ. ಹೀಗೆ ನೋಡಿದರೆ ಪಾಳಿಯು ಸಂಸ್ಕೃತಕ್ಕಿಂತಲೂ ಹಿಂದಿನದು. ಇವೆರಡು ಛಂದಸ್ಸು ಮತ್ತು ಪ್ರಾಕೃತಗಳಿಂದ ಬಂದವು.

ಪ್ರಸಿದ್ಧನಾದ ಪಾಶ್ಚಿಮಾತ್ಯ ವ್ಯಾಕರಣಕಾರನಾದ ಡಾ॥ ಗೈಗರ್‌ನು ಬುದ್ಧನು ಏಕೆ ಛಂದಸ್ಸನ್ನು ಬಳಸದೆ ಸಾಮಾನ್ಯರ ಭಾಷೆ ಮಾಗಧಿ ಪ್ರಾಕೃತವನ್ನು ಬಳಸಿದ ಬಗ್ಗೆ ಹೀಗೆ ಹೇಳುತ್ತಾನೆ: "ಬುದ್ಧನು ಆಡಿದ ಭಾಷೆ ಆಗಿನ ಕಾಲದ ಸಾಮಾನ್ಯರು ಆಡಿದ ಭಾಷೆ ಎಂದು ಸಂಸ್ಕೃತ ಪಂಡಿತರು ಹೇಳುವುದು ಒಂದು ಕುಚೋದ್ಯ. ನಿಜವೆಂದರೆ ಪಂಡಿತೋತ್ತಮರು ಸಂಸ್ಕೃತಿ ಸಂಪನ್ನರು ಆಡುತ್ತಿದ್ದ ಭಾಷೆ ಮತ್ತು ಅದು ಬುದ್ಧ ಪೂರ್ವದಲ್ಲೇ ಭಾರತದಲ್ಲಿ ಪ್ರಚಲಿತವಾದುದು ಆಗಿತ್ತು. ಅಂತಹ ಪರಿಪೂರ್ಣ ಭಾಷೆ ಸಹಜವಾಗಿ ಎಲ್ಲ ಆಡುಭಾಷೆಗಳನ್ನು ಜೀರ್ಣಿಸಿಕೊಂಡಿರುತ್ತದೆ (ಪಾಳಿ ಲಿಟರೇಚರ್ ಅಂಡ್ ಲ್ಯಾಂಗ್ವೇಜ್, ಗೈಗರ್).

ಒಟ್ಟಿನಲ್ಲಿ ಹೇಳುವುದಾದರೆ ಪಾಳಿಯು ಮಾಗಧಿ ಪ್ರಾಕೃತಿಯ ಜನ್ಯ ರೂಪವಾದರೆ, ಮಂದ ಭಾಷೆ ಸಂಸ್ಕೃತವು ಛಂದಸ್ಸಿನಿಂದ ಜನ್ಯವಾಯಿತು. ಪುನಃ ಪಾಳಿಯು ವೇದ ಭಾಷೆಯ ಹಲವಾರು ಸಮಾನ ವ್ಯಾಕರಣ ರೂಪಗಳನ್ನು ಹೊಂದಿದ್ದರೆ ಈಗಿನ ಶಾಸ್ತ್ರೀಯ ಸಂಸ್ಕೃತವು ಅವುಗಳನ್ನು ಕೈಬಿಟ್ಟಿದೆ. ಇದರಿಂದ ಏನು ಹೇಳಬಹುದೆಂದರೆ ಪಾಳಿಯು ಸಂಸ್ಕೃತಕ್ಕಿಂತಲೂ ಹಳೆಯದು.

ಪಾಳಿ ಗ್ರಂಥವಾದ ತಿಪಿಟಕವು ಬುದ್ಧವಚನವನ್ನು ಆಧರಿಸಿದ್ದು ಬುದ್ಧ ಜ್ಞಾನೋದಯದಿಂದ ಹರಿಯುತ್ತದೆ.

ಬೋಧಿಯು ಒರತೆಯಾದರೆ ಅಲ್ಲಿಂದ ಹೊರಹೊಮ್ಮುವುದೇ ಬುದ್ಧವಾಣಿ. ಆದ್ದರಿಂದ ಭಾರತದಲ್ಲಿ ಯಾವಾಗ ಬುದ್ಧ ವಚನವು ಕ್ಷೀಣಿಸಿತೊ ನಂತರದಲ್ಲಿ ಮಾಯುವಾಯಿತೊ, ಥೇರವಾದವೆಂಬ ಬೌದ್ಧಾಚರಣೆ ಕೂಡ ಇಳಿಮುಖವಾಯಿತು. ಬುದ್ಧವಚನ ಪುನರಾರಂಭಗೊಳ್ಳಬೇಕಾದರೆ ಬೌದ್ಧ ಧಮ್ಮ ಸಾಧನೆ ಆರಂಭಗೊಳ್ಳಬೇಕು. ಥೇರವಾದ ಮಾತ್ರವೇ ಬುದ್ಧನ ಮೂಲ ಬೋಧನೆಗಳನ್ನು ಉಳಿಸಿಕೊಂಡು ಬಂದಿದೆ. ಬೋಧಿ ಜ್ಞಾನವನ್ನು ಬುದ್ಧನು ಮಾತ್ರವೇ ಕಂಡುಕೊಂಡುದರಿಂದ ಸತ್ಯ ಸಾಧಕರಾದ ನಾವೇ ಬೋಧಿಯನ್ನು ಅರಿಯಬೇಕು. ಆದ್ದರಿಂದಲೇ 'ಬೋಧಿ' (ಜ್ಞಾನೋದಯ) ಎನ್ನುವುದೇ 'ಈಗಲೇ ಇಲ್ಲಿಯೇ' ನಾವೇ ಕಂಡುಕೊಳ್ಳುವ, ಸಾಧನೆಯಿಂದ ನಾವೇ ಪರಿಕ್ಷಿಸುವ (ವಹಿಪಸ್ಸಿಕೊ), ಜ್ಞಾನಿಗಳಾದ ತಾವೇ ಸಾಕ್ಷಾತ್ಕರಿಸಿಕೊಳ್ಳುವಂತದ್ದು. (ಪಚ್ಚತ್ತಂ ವೇದಿತಬ್ಬೋ ವಿಞ್ಞಾಹಿ). ಇದಕ್ಕೆ ದೇವರಾಗಲಿ, ಗುರುಗಳಾಗಲಿ ಬಂದು ಉದ್ಧಾರ ಮಾಡುವುದಿಲ್ಲ.

ಬುದ್ಧವಚನ ಅಥವಾ ತಿಪಿಟಕವು ಈ ಗುಣಗಳ ಸುತ್ತಲೇ ಸುತ್ತುತ್ತಿದೆ. ಆದ್ದರಿಂದ ಥೇರವಾದ ತಿಪಿಟಕವು ಕೇವಲ ಒಂದು ಧರ್ಮ ಸಾಹಿತ್ಯವಲ್ಲ ಅಥವಾ ಸಿದ್ಧಾಂತಗಳ ಗಣಿಯಲ್ಲ. ಗೌತಮನು ಬೋಧಗಯಾದಲ್ಲಿ ಬೋಧಿ ಜ್ಞಾನವನ್ನು ಪಡೆದು ಬುದ್ಧನಾಗಿ ಕುಸಿನಾರದಲ್ಲಿ ಮಹಾ ಪರಿನಿಬ್ಬಾಣವನ್ನು ಹೊಂದುವವರೆಗೂ ಅಂದರೆ ಈ ನಲವತ್ತೈದು ವರ್ಷಗಳಲ್ಲಿ ಏನೆಲ್ಲಾ ಬೋಧಿಸಿದನೋ ಅದೆಲ್ಲವೂ ತಿಪಿಟಕದ ವಸ್ತುವಾಗಿ ಮೂರು ಭಿನ್ನ ರೂಪಗಳಲ್ಲಿ ಸಂರಕ್ಷಿಸಲ್ಪಟ್ಟಿದೆ. ಮೊದಲಿಗೆ ಪರಿಪೂರ್ಣವಾದ ಜ್ಞಾನ ಪರಂಪರೆ, ಪರಿಯತ್ತಿ; ಎರಡನೆಯದು, ಜ್ಞಾನವನ್ನು ಸಾಧನೆಯ ಒರೆಗೆ ಹಚ್ಚುವುದು, ಪಟಿಪತ್ತಿ; ಮೂರನೆಯದು, ಜ್ಞಾನ ಸಾಧನೆಯಿಂದ ಅಂತಿಮ ಸತ್ಯದ ಸಾಕ್ಷಾತ್ಕಾರ. (ಬೋಧಿ ಜ್ಞಾನ, ಮುಕ್ತಿ, ಅಥವಾ ಸಂಸಾರ ದುಃಖದಿಂದ ಬಿಡುಗಡೆ); ಪಟಿವೇಧ. ಹೀಗೆ ತಿಪಿಟಕವು ಪವಿತ್ರ ಬ್ರಹ್ಮಚರ್ಯ ಜೀವನವನ್ನು ನಡೆಸುವ ಜೀವಂತ ಪರಂಪರೆ ಮತ್ತು ಮುಂದಿನ ಸಂತತಿಗಾಗಿ ಬಿಟ್ಟುಹೋಗುವ ಭವ್ಯ ಗುರಿ. ಹೀಗೆ ತಿಪಿಟಕವನ್ನು ಅರ್ಥೈಸುವುದು ವಾಸ್ತವದಲ್ಲಿ ಅಸ್ತಿತ್ವವಾದಿ ಧರ್ಮ ಗ್ರಂಥಗಳಿಗಿಂತಲೂ ಭಿನ್ನವಾಗಿಯೂ ಮತ್ತು 'ಆಗಮ ಪ್ರಮಾಣ'ಗಳಲ್ಲಿ ಶ್ರುತವಾಗಿರುವ ಅಧಿಕಾರ ಸಿದ್ಧಾಂತಗಳಿಗಿಂತ ವ್ಯತಿರಿಕ್ತವಾದುದು.

'ತಿಪಿಟಕ' ಪದದಲ್ಲಿ 'ತಿ(= ಮೂರು) + ಪಿಟಕ (= ಬುಟ್ಟಿ) ಎಂಬುದಾಗಿ ಇವೆ.

ಈ ಮೂರು ಬುಟ್ಟಿಗಳು ಯಾವುವೆಂದರೆ:

೧. ವಿನಯ ಪಿಟಕ

೨. ಸುತ್ತ ಪಿಟಕ

೩. ಅಭಿಧಮ್ಮ ಪಿಟಕ

ವಿನಯಪಿಟಕದಲ್ಲಿ ಸಂಘದಲ್ಲಿರುವ ಭಿಕ್ಖುಗಳು (ಸಂನ್ಯಾಸಿಗಳು) ಪಾಲಿಸಬೇಕಾದ ನಿಯಮಗಳಿವೆ.

ಸುತ್ತಪಿಟಕದಲ್ಲಿ ಬುದ್ಧರು ಅನೇಕ ಸಂಗತಿಗಳ ಮೇಲೆ ನೀಡಿದ ಉಪದೇಶಗಳು ಅಡಕವಾಗಿವೆ.

ಅಭಿಧಮ್ಮ ಪಿಟಕದಲ್ಲಿ ಬುದ್ಧರು ಮನಸ್ಸು ಮತ್ತು ಆಧ್ಯಾತ್ಮದ ಮೇಲೆ ನೀಡಿದ ಉನ್ನತೋನ್ನತವಾದ ವಿಶ್ಲೇಷಣಾತ್ಮಕವಾದ ಧಮ್ಮೋಪದೇಶಗಳಿವೆ.

ಸುಗತರು ಇದ್ದ ಕಾಲದಲ್ಲಿಯೇ ಅವರ ಧಮ್ಮೋಪದೇಶಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಅವನ್ನು ಭಿನ್ನವರ್ಗಗಳಾಗಿ ವಿಂಗಡಿಸಲಾಗಿದೆ. ಉದಾಹರಣೆಗೆ ಉದಾನ ಪಾಳಿಯಲ್ಲಿ ಭಿಕ್ಖು ಸೋಣನು ಒಂದು ವರ್ಷದ ಮಟ್ಟಿಗೆ ಮಾತ್ರ ಸಂನ್ಯಾಸಿಯಾಗಿ ಇದ್ದ ಬಗ್ಗೆ ಉಲ್ಲೇಖವಿದೆ. ಅವನು ಬುದ್ಧನನ್ನು ನೋಡಲು ಬಹುದೂರದ ಅವಂತಿಯಿಂದ ಬರುತ್ತಾನೆ. ಬುದ್ಧ ಅವನಿಗೆ ಹೇಳುತ್ತಾನೆ: "ಭಿಕ್ಖುವೇ, ಧಮ್ಮವನ್ನು ಪಠಿಸುವಷ್ಟು ಒಳ್ಳೆಯವನಾಗು". "ಹಾಗೆಯೇ ಆಗಲಿ ಭಂತೆ" ಎನ್ನುತ್ತಾನೆ. ತನ್ನ ನೆನಪಿನ ಶಕ್ತಿಯಿಂದ ಸುತ್ತ ನಿಪಾತದ ಎಂಟನೇ ಅಧ್ಯಾಯದಲ್ಲಿರುವ ಹದಿನಾರು ಸುತ್ತಗಳನ್ನು ಪಠಿಸುತ್ತಾನೆ.

"ಪಟಿಬಾತು ತಂ, ಭಿಕ್ಖು ಧಮ್ಮೋ ಭಾಸಿತುಂ'ತಿ." ಏವಂ ಭನ್ತೇ ತಿ ಖೊ ಆಯಸ್ಮಾ ಸೋಣೊ ಭಗವತೋ ಪಟಿಸ್ಸುತ್ವಾ ಸೋಳಸ ಅಟ್ಠಃಧಾವಗ್ಗಿಕಾನಿ ಸಬ್ಬಾನೇವ ಸರೇನ ಅಭಣಿ." (ಸುತ್ತ ನಿಪಾತ ೭೭೨-೯೮೧).

"ಪೂಜ್ಯ ಸೋಣನು ಕಂಠಪಾಠವನ್ನು ಮುಗಿಸಿದ ಮೇಲೆ ಸುಗತರು ಅಭಿನಂದಿಸಿ, "ಭಿಕ್ಖುವೇ, ಚೆನ್ನಾಗಿಯೇ ಮಾಡಿದೆ, ಕಂಠಪಾಠ ಮಾಡಿಕೊಂಡಿದ್ದೀಯೇ, ಚೆನ್ನಾಗಿಯೇ ಮಾಡಿರುವೆ. ಭಿಕ್ಖು, ನೀನು ಎಂಟನೇ ಅಧ್ಯಾಯದ

ಹದಿನಾರು ಸುತ್ತಗಳ ಮೇಲೆ ಧ್ಯಾನವಿರಿಸಿರುವೆ. ನಿನ್ನ ಕಂಠವು ಅಸ್ಖಲಿತ ಉಚ್ಛ್ವಾಸದಿಂದ ಮಧುರವಾಗಿದೆ, ಅರ್ಥವೂ ಸ್ಪಷ್ಟವಾಗುತ್ತದೆ." "ನಿನಗೆ ಎಷ್ಟು ವರ್ಷಗಳ ವರ್ಷಾವಾಸದ ಅನುಭವವಿದೆ?" "ನನಗೆ ಒಂದು ವರ್ಷದ ಅನುಭವವಿದೆ, ಪೂಜ್ಯರೇ."

"ಅಥ ಖೋ ಭಗವಾ ಆಯಸ್ಮತೋ ಸೋಣಸ್ಸ ಸಂಭಙ್ಞಾ ಪರಿಯೋಸನೆ ಅಬ್ಭಾನುಮೋದಿ: 'ಸಾಧು ಸಾಧು ಭಿಕ್ಖು! ಸುಗ್ಗಹಿತಾನಿ ತೆ, ಭಿಕ್ಖು, ಸೋಳಸ ಅಟ್ಠಕವಗ್ಗಿಕಾನಿ ಸುಮನಸಿಕತಾನಿ, ಸೂಪಧಾರಿತಾನಿ, ಕಲ್ಯಾಣಿಯಾಸಿ ವಾಚಾಯ ಸಮನ್ನಾಗತೋ ವಿಸ್ಸಕಾಂಟ್ಠಾಯ ಅನೇಲಗಳಾಯ ಅತ್ಥಸ್ಸ ವಿಞ್ಞಾಪನಿಯಾ." "ಕತಿವಸ್ಸೋಸಿ ತ್ವಂ ಭಿಕ್ಖೂತಿ?" "ಏಕವಸ್ಸೇ ಅಹಂ ಭಗವಾ'ತಿ."

ಈ ರೀತಿಯ ವಿವರಗಳು ಪಾಳಿ ಗ್ರಂಥಗಳಲ್ಲಿ ಬೇಕಾದಷ್ಟಿವೆ. ಪಾಳಿ ಗ್ರಂಥಗಳ ವ್ಯವಸ್ಥಿತ ರೂಪಕ್ಕೆ ಈ ಕೆಳಗಿನ ಸೂತ್ರ ವಾಕ್ಯಗಳು ಬಹು ಮುಖ್ಯವಾಗಿವೆ. ಧಮ್ಮಧಾರೋ–ಧಮ್ಮವನ್ನು ಪಠಿಸುವವರು; ವಿನಯಧಾರೊ–ವಿನಯವನ್ನು ಪಠಿಸುವವರು, ಮಾತಿಕಾಧಾರೋ–ಮಾತಿಕಾ ಅಥವಾ ಅಭಿಧಮ್ಮವನ್ನು ಪಠಿಸುವವರು, ಬಹುಸ್ಸುತೋ ಧಮ್ಮವಿನಯೇ–ಧಮ್ಮ ಮತ್ತು ವಿನಯದಲ್ಲಿ ವಿದ್ವಾಂಸನು, ಆಗತಾಗವೋ, ಆಗತ ಮತ್ತು ಆಗಮಗಳಲ್ಲಿ ಬಹುಶ್ರೂತನು, ಬಾಣಕೋ–ಪವಿತ್ರ ಗ್ರಂಥವನ್ನು ನೆನಪಿನಿಂದಲೇ ಹೇಳುವವನು, ಇತ್ಯಾದಿ.

ಅಶೋಕನ ಶಿಲಾಶಾಸನಗಳು (ಬುದ್ಧನ ಮಹಾ ಪರಿನಿಬ್ಬಾಣವಾದ ೨೨೦ ವರ್ಷಗಳ ನಂತರ) ಕೂಡ ಕೆಲವು ಪದಗಳನ್ನು ಬಳಸಿವೆ. ಉದಾ: ಪೇಟಕಿ–ತಿಪಿಟಕಗಳನ್ನು ಪಠಿಸುವವನು ಮತ್ತು ಪಂಚನೇ ಕಮಿಕೊ– ಐದು ನಿಕಾಯಗಳನ್ನು ಪಠಿಸುವವನು ಮತ್ತು ಧಮ್ಮಭಂದಾಗಾರಿಕಾ ಎಂಬ ಬಿರುದನ್ನು ಸ್ವತಃ ಬುದ್ಧನೇ ಪೂಜ್ಯ ಆನಂದನಿಗೆ ನೀಡಿದ್ದು; ಇಡೀ ತಿಪಿಟಿಕವನ್ನೇ ಧಮ್ಮದ ಮೇಲೆ ಆನಂದನು ಕಿರಾತಲಾಮಲಕ ಮಾಡಿಕೊಂಡಿದ್ದನು ಮತ್ತು ಟೀಕಾ ಸಾಹಿತ್ಯವು ಕ್ಷಿಪ್ರವಾಗಿ ಬೆಳೆಯಿತು.

ಸುಗತರ ಕಾಲದಲ್ಲಿದ್ದ ಇಡೀ ತಿಪಿಟಕವು ಈಗಲೂ ನಮಗೆ ದೊರೆಯುವುದಕ್ಕೆ ಕಾರಣವೆಂದರೆ ನಮ್ಮ ಹಿರಿಯರ, ಥೇರರ ಮುಂದಾಲೋಚನೆ ಮತ್ತು ಹೃದಯ ವೈಶಾಲ್ಯತೆ. ಆದ್ದರಿಂದ ಎಲ್ಲ ಬೌದ್ಧರು, ಅವರು ಯಾವುವೇ ಪರಂಪರೆಗೆ ಸೇರಿದವರಾಗಲಿ ಎಲ್ಲ ಥೇರರಿಗೂ, ಇಬ್ಬರು ಪ್ರಮುಖ ಶಿಷ್ಯರಿಗೂ, ಎಂಭತ್ತು ಮಹಾ ಶಿಷ್ಯರಿಗೂ ಮತ್ತು ಐದುನೂರು ವಿದ್ಯಾಂಸ ಶಿಷ್ಯರಿಗೂ, ಎಲ್ಲ ಅರ್ಹತರಿಗೂ, ಪಟಿಸಂಭಿದ ಜ್ಞಾನದಿಂದ ದಿವ್ಯಶಕ್ತಿಯನ್ನು ಹೊಂದಿದ ಎಲ್ಲರಿಗೂ ನಾವು ಋಣಿಯಾಗಿರಬೇಕು. ಇವರು ತಮ್ಮ ಅದ್ಭುತವಾದ ನೆನಪಿನ ಶಕ್ತಿಯಿಂದ ಭಗವಾನರ ಪ್ರತಿಯೊಂದು ಮಾತನ್ನು ತಿಳಿದು, ಅದರೊಳಗಡೆ ಇರುವ ಅರ್ಥವನ್ನು ವಿವರಿಸಿದ್ದಾರೆ. ಆದ್ದರಿಂದ ಈ ಎಲ್ಲ ಥೇರರು ಮಹಾ ಗುರುವಿನ ಕಾಲದಲ್ಲೇ ಇದ್ದ ಧಮ್ಮದ ಮಹಾನ್ ಆಚಾರ್ಯರು ಮತ್ತು ನಿಜವಾದ ಪ್ರತಿಪಾದಕರು.

ಧಮ್ಮದ ಈ ಮಹಾ ಆಚಾರ್ಯರೇ ಮತ್ತು ಪವಿತ್ರ ಭಿಕ್ಖು ಸಂಘದ ಪ್ರತಿಭಾನ್ವಿತ ಥೇರರೇ, ಬುದ್ಧ ಭಗವಾನರ ಮಹಾ ಪರಿನಿಬ್ಬಾಣದ ನಂತರ 'ಅನುತ್ತರವಾದ' ಜ್ಞಾನ ಭಂಡಾರದ ಈ ಧಮ್ಮವನ್ನು ಮುಂದಿನ ಜನಾಂಗಕ್ಕಾಗಿ ಪಾಲಿಸಿ ಪೋಷಿಸಿದ್ದಾರೆ. ವಿನಯಪಿಟಕದಲ್ಲಿ ದಾಖಲಾದಂತೆ ಬುದ್ಧನ ಮಹಾಪರಿನಿಬ್ಬಾಣದ ನಂತರ ಬುದ್ಧ ಶಾಸನದ ಥೇರರು ಮತ್ತು ಆಚಾರ್ಯರು ಸೇರಿ ಧಮ್ಮ ಸಂಗೀತಿ (ಮೊದಲ ಬೌದ್ಧ ಸಂಗಾಯನ)ಯನ್ನು ಆಯೋಜಿಸುವ ಸಂದರ್ಭ ಒದಗಿಬಂತು. ಇದರ ಉದ್ದೇಶವೆಂದರೆ ಬುದ್ಧನು ಉಪದೇಶಿಸಿದ ಧಮ್ಮ ಮತ್ತು ವಿನಯವನ್ನು ನೆನಪಿನಿಂದ ಕಂಠಸ್ಥ ಮಾಡಿ ಹೇಳುವುದು. ಹೀಗೆ ಮಾಡುವುದರಿಂದ ಜ್ಞಾನ, ಸಾಧನೆ ಮತ್ತು ಸಾಕ್ಷಾತ್ಕಾರವೆಂಬ ಮೂರು ಮೂಲಗಳಿಂದ ಪರಿಯತ್ತಿ, ಪಟಿಪತ್ತಿ ಮತ್ತು ಪಟಿವೇಧ ಸಮ್ಮಾಸಂಬುದ್ಧರ ಮಾತುಗಳನ್ನು ಮೂಲ ರೂಪದಲ್ಲೇ ಸಂರಕ್ಷಿಸಿಕೊಂಡು ಬರುವುದು.

ಮೇಲೆ ಹೇಳಿದ ಸಂದರ್ಭ ಯಾವುದೆಂದರೆ ಸುಬದ್ಧ ಎನ್ನುವ ನಾಪಿತ ಕುಲದವನು ಮುಪ್ಪಿನಲ್ಲಿ ಭಿಕ್ಖುವಾದ ಮೇಲೆ ಒಮ್ಮೆ ಭಿಕ್ಖುಗಳ ಗುಂಪಿಗೆ ಅಗೌರವ ತರುವ ರೀತಿಯಲ್ಲಿಯೇ ಹೀಗೆ ಹೇಳುತ್ತಾನೆ: 'ಇನ್ನು ಸಾಕು, ಸೋದರರೆ, ಶೋಕಿಸುವುದು ಸಾಕು, ಮಹಾಸಮಣ ತೊಲಗಿ ಹೋದ.' ಮಹಾಸಮಣ ಇಲ್ಲಿ 'ಬುದ್ಧರು.'

"ನಾವು ಅವರಿಂದ ಸೃಷ್ಟಿಸಲ್ಪಟ್ಟ ವಿನಯದಿಂದ (ಶಿಸ್ತಿನ ನಿಯಮಗಳು) ಬಹಳ ತೊಂದರೆಗೊಳಗಾದೆವು. 'ಇದನ್ನು ಮಾಡಬೇಕು, ಇದನ್ನು ಮಾಡಬಾರದು; ಆದರೆ ಈಗ ನಾವು ಏನು ಮಾಡಬೇಕೆನ್ನಿಸುತ್ತದೊ ಅದನ್ನು ನಾವು ಮಾಡಬಹುದು ಮತ್ತು ಏನು ಮಾಡಬಾರದೆಂದು ನಮಗನಿಸುತ್ತದೋ ಅದನ್ನು ಮಾಡದೇ ಇರಬಹುದು.

ವೃದ್ಧನಾದ ಸುಭದ್ಧನು ಆರಾಮವಾದ ಬದುಕನ್ನು ಮಾಡಬೇಕೆಂದು ಒಬ್ಬ ಕಳ್ಳ ಸಂನ್ಯಾಸಿಯಾದನು. ಸಂಘದಲ್ಲಿ ಸೇರುವುದು ಅವನಿಗೆ ಸುಲಭವಿತ್ತು. ಕಾರಣ ಅಲ್ಲಿ ಜಾತಿ ಅಥವಾ ಯಾವುದೇ ನಿರ್ಬಂಧಗಳಿರಲಿಲ್ಲ. ಸಂಘದಲ್ಲಿ ರಾಜರೂ ಸದಸ್ಯರಾಗಿದ್ದರು ಸುಭದ್ಧನೂ ಇರುವಂತೆ. ಸುಭದ್ಧನ ಈ ಮಾತನ್ನು ಸಂಘದ ಅತ್ಯಂತ ಹಿರಿಯ ನಾಯಕನಾದ ಮಹಾಕಸ್ಸಪನು ಕೇಳಿಸಿಕೊಂಡನು. ಸುಭದ್ಧನ ಈ ರೀತಿಯ ಮನೋ ಧರ್ಮದಿಂದ ಬುದ್ಧ ಶಾಸನಕ್ಕೆ ತೊಂದರೆಯಾಗುತ್ತದೆಂದು ಯೋಚಿಸಿದನು.

ಆದ್ದರಿಂದಲೇ ಐದು ನೂರು ಮಹಾ ವಿದ್ವಾಂಸರಾದ ಅರ್ಹಂತರನ್ನು ಎಲ್ಲ ಧಮ್ಮ ಆಚಾರ್ಯರನ್ನು ಸೇರಿಸಿ ಸಭೆ ಕರೆದನು. ಈ ಎಲ್ಲಾ ಥೇರರು ಒಂದೆಡೆ ರಾಜಗಹದ ಸತ್ತಪಣ್ಣಿ ಗುಹೆಯಲ್ಲಿ ಮೊಟ್ಟಮೊದಲ ಬೌದ್ಧ ಸಂಗಾಯನದಲ್ಲಿ ಸೇರಿದರು. ಈ ಐತಿಹಾಸಿಕ ಸಭೆಗೆ ರಾಜ ಅಜಾತಸತ್ತುವು ಎಲ್ಲ ವ್ಯವಸ್ಥೆಯನ್ನು ಮಾಡುವುದರ ಮೂಲಕ ಬೆಂಬಲ ವ್ಯಕ್ತಪಡಿಸಿದನು. ಈ ಸಂಗಾಯನವು ಈಗ ನಾವು ಯಾವ ತಿಪಿಟಕವನ್ನು ನೋಡುತ್ತಿದ್ದೆವೊ ಅದನ್ನು ಏಳು ತಿಂಗಳಕಾಲ ಪಠಿಸಿತು.

ಇಬ್ಬರು ಮಹಾಪಠಕರು ಪೂಜ್ಯ ಅರ್ಹಂತ ಉಪಾಲಿಯು ವಿನಯದ ಮೇಲೆ ಪಾಂಡಿತ, ಹೊಂದಿದವರು ವಿನಯವನ್ನು ಪಠಿಸಿದರು. ಇನ್ನೊಬ್ಬರು ಪೂಜ್ಯ ಆನಂದರು ಧಮ್ಮಭಂದಗಾರಿಕಾ ಆಗಿದ್ದರು. ಅವರಿಗೆ ಮೂರು ಪಿಟಕಗಳ ಮೇಲೂ ಪಾಂಡಿತ್ಯವಿತ್ತು. ಹೀಗೆ ಥೇರವಾದ ಮಹಾ ಸಂಘದ ದೆಸೆಯಿಂದಾಗಿಯೇ ಬುದ್ಧನ ಉಪದೇಶಗಳು ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬಂದು ಇಲ್ಲಿಯವರೆಗೂ ಇವೆ.

ಮಹಾ ಥೇರರಾದ ಮಹಾಕಸ್ಸಪರು ಈ ಕೆಳಗಿನಂತೆ ವಿಧಾನವನ್ನು ಅನುಸರಿಸಿದರು. ಮೊದಲು ಅವರು ಸಂಘವನ್ನು ಸೇರಿಸಿ ಬುದ್ಧವಚನ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬರಲು ಮತ್ತು ಮುಂದಿನ ಜನಾಂಗದ ಅನುಕೂಲಕ್ಕಾಗಿ ಪಠಿಸುವವರ ಪರಿಷತ್ತನ್ನು ಅಂದರೆ 'ಧಮ್ಮ ಸಂಗೀತಿ'ಯನ್ನು ಕೂಡಲೇ ಸೇರಿಸಬೇಕೆಂದರು. ಸಂಘವು ಅದಕ್ಕೆ ಒಪ್ಪಿಗೆ ನೀಡಿತು. ರಾಜಗಹವನ್ನು ಪರಿಷತ್ತಿನ ಸ್ಥಳವನ್ನಾಗಿ ಆರಿಸಿಕೊಂಡು ಪೂಜ್ಯ ಮಹಾ ಕಸ್ಸಪರಿಗೆ ಪಠಿಸುವವರನ್ನು ಆಯ್ಕೆ ಮಾಡಿಕೊಳ್ಳಲು ಅಧಿಕಾರ ನೀಡಿತು. ಅವರು ಐದುನೂರು ವಿದ್ವಾಂಸರಾದ ಅರ್ಹಂತ ಶಿಷ್ಯರನ್ನು ಆಯ್ಕೆ ಮಾಡಿದರು. ಅವರೆಲ್ಲರೂ ಪಟಿಸಂಭಿಧ ಜ್ಞಾನವನ್ನು ಹೊಂದಿ, ಇಡೀ ಬುದ್ಧವಚನವನ್ನು ತಮ್ಮ ದಿವ್ಯ ಶಕ್ತಿಯಿಂದ ನೆನಪಿನಲ್ಲಿಟ್ಟುಕೊಂಡು ಪಠಿಸುವವರಾಗಿದ್ದರು.

ಪೂಜ್ಯ ಮಹಾ ಕಸ್ಸಪರು ಮಗಧ ದೇಶದ ದೊರೆ ಅಜಾತಸತ್ತುವಿಗೆ ಸಂಘದ ತೀರ್ಮಾನವನ್ನು ತಿಳಿಸಿದರು. ಮಗಧದ ಪ್ರಭಾವಶಾಲಿ ರಾಜನಾದ ಅಜಾತಸತ್ತುವು ಬುದ್ಧನ ವಿನಮ್ರ ಅನುಯಾಯಿ. ಈ ಹಿಂದೆ ರಾಜಗಹವನ್ನೇ ಆಯ್ಕೆ ಮಾಡಿಕೊಳ್ಳಬೇಕೆಂದು ವಿನಂತಿಸಿದ್ದ. ಆದ್ದರಿಂದ ಸತ್ತಪಣ್ಣಿ ಗುಹೆಯ ಹೊರಗಡೆ ಒಂದು ವಿಶಾಲ ವೇದಿಕೆಯನ್ನು ಎಲ್ಲ ವಾಸ್ತು ಲಕ್ಷಣಗಳೊಂದಿಗೆ ನಿರ್ಮಿಸಿ ಪರಿಷತ್ತಿಗಾಗಿ ಎಲ್ಲ ವ್ಯವಸ್ಥೆಯನ್ನೂ ಮಾಡಿದ. ಹೀಗೆ ಬುದ್ಧನ ಮಹಾ ಪರಿನಿಬ್ಬಾಣದ ಮೂರು ತಿಂಗಳ ತರುವಾಯ ಐದುನೂರು ವಿದ್ವಾಂಸರಾದ ಅರ್ಹಂತ ಥೇರರು, ಜ್ಞಾನೋದಯ ಹೊಂದಿದ ಬುದ್ಧನ ಶಿಷ್ಯರು ರಾಜಗಹದಲ್ಲಿ ಸೇರಿ ಮಹಾ ಗುರುವಿನ ಎಲ್ಲ ಉಪದೇಶಗಳನ್ನು ಏಳು ತಿಂಗಳ ಕಾಲ ಪಠಿಸಿದರು. ಪೂಜ್ಯ ಮಹಾಕಸ್ಸಪರು ಈ ಅಭೂತಪೂರ್ವವಾದ ಮೊದಲು ಮಹಾ ಸಂಗಾಯನದ ಅಧ್ಯಕ್ಷರಾಗಿದ್ದರು.

ಭಗವಾನ್ ಬುದ್ಧರೇ ಪೂಜ್ಯ ಉಪಾಲಿ ಥೇರರನ್ನು ವಿನಯದಲ್ಲಿ ಮಹಾ ಪಂಡಿತನೆಂದು ಗುರುತಿಸಿದ್ದರು. ಇಂತಹ ಉಪಾಲಿಯು ವಿನಯದ ಪ್ರತಿಯೊಂದು ಭಾಗವನ್ನು ಅದರ ಚಾರಿತ್ರಿಕ ಹಿನ್ನೆಲೆಯನ್ನು ನೀಡುತ್ತಾ ಇಡೀ ವಿನಯಪಿಟಕವನ್ನು ಪಠಿಸಿದರು. ಬುದ್ಧರು ಪೂಜ್ಯ ಆನಂದ ಥೇರರನ್ನು ಧಮ್ಮಭಂದಗಾರಿಕಾ ಎಂದು ಕರೆದಿದ್ದರು. ಇಂತಹ ಆನಂದರು ಇಡೀ ಸುತ್ತ ಮತ್ತು ಮಾತಿಕಾ (ಅಭಿಧಮ್ಮ ಪಿಟಕ)ಗಳನ್ನು ಪಠಿಸಿದರು. ಹೀಗೆ ಬುದ್ಧೋಪದೇಶಗಳು ಮಹಾ ಗುರುವಿನ ಕಾಲದಲ್ಲೇ ವ್ಯವಸ್ಥೆಗೆ ಒಳಪಟ್ಟು ಅಲ್ಲಿಂದ ಇಲ್ಲಿಯವರೆಗೆ ಅಧಿಕೃತವಾಗಿ ಮೊದಲ ಸಂಗಾಯನದ ಮೊದಲ ಅಗ್ರಗಣ್ಯ ವಿದ್ವಾಂಸ, ಪ್ರಸಿದ್ಧ ಅರ್ಹಂತರಿಂದ ನಮಗೆ ಬಂದಿವೆ.

ಪ್ರಪಂಚದ ಧರ್ಮಗಳ ಇತಿಹಾಸಗಳಲ್ಲಿ ಈ ಪವಿತ್ರ ಗ್ರಂಥದ್ದೇ ಒಂದು ವಿಶೇಷ. ಇದನ್ನು ಬುದ್ಧನಕಾಲದಿಂದ ಇಲ್ಲಿಯವರೆಗೂ ಭಕ್ತಿಪೂರ್ವಕವಾಗಿ ರಕ್ಷಿಸಿಕೊಂಡು ಅನೂಚಾನವಾಗಿ ಗುರು–ಶಿಷ್ಯ ಪರಂಪರೆಯ ಮೂಲಕ ಉಳಿಸಿಕೊಂಡು ಬಂದುದರ ಫಲವೇ ಇಂದು ಈ ಧರ್ಮ ಗ್ರಂಥವಿದೆ. ಆನಂತದಲ್ಲಿ ಐದು ಸಂಗಾಯನಗಳು ನಡೆದವು. ಆರನೆಯ ಸಂಗಾಯನವನ್ನು ೧೯೫೪ರಲ್ಲಿ ಮ್ಯೆಯನ್ಮಾರ್ ಸರ್ಕಾರವು ನಡೆಸಿತು. ಇದನ್ನೇ ಆರನೇ

ಸಂಗಾಯನವೆಂದು ಕರೆಯುತ್ತಾರೆ.

ಪ್ರತಿ ಸಂಗಾಯನಕ್ಕೂ ಒಂದು ಕೆಲಸವನ್ನು ಸಾಧಿಸುವುದಿತ್ತು. ಅದರ ಏಕಮಾತ್ರ ಉದ್ದೇಶವೆಂದರೆ ಧಮ್ಮೋಪದೇಶವನ್ನು ಸಂಕಲನ ವ್ಯವಕಲನ ವಿಧಾನಗಳಿಂದ ಭಂಗಗೊಳ್ಳದಂತೆ, ಊನವಾಗದಂತೆ ರಕ್ಷಿಸಿಕೊಂಡು ಬರುವುದು. ಎರಡನೇ ಸಂಗಾಯನವು ಬುದ್ಧನು ಪರಿನಿಬ್ಬಾಣವಾದ ನೂರು ವರ್ಷಗಳ ನಂತರ ವೇಸಾಲಿಯಲ್ಲಿ ನಡೆಯಿತು. ಅದು ವಿನಯದ ಹತ್ತು ಅಂಶಗಳ ಮೇಲಿನ ವಿವಾದವನ್ನು ಪರಿಹರಿಸಲು ಆ ಸಂಗಾಯನವು ಆಯೋಜನೆಗೊಂಡಿತು. ಕೆಲವು ವೈಶಾಲಿ ಭಿಕ್ಖುಗಳು, ಅವರೆಲ್ಲಾ ಈ ಹಿಂದೆ ರಾಜಕುಮಾರರು ಮತ್ತು ಉನ್ನತ ಸ್ತರದ ಕುಟುಂಬಗಳಿಂದ ಬಂದವರು. ಅವರುಗಳು ತಮ್ಮ ಆರಾಮದ ಬದುಕಿಗಾಗಿ ಸಂನ್ಯಾಸಿ ಜೀವನವನ್ನು ಸರಳಗೊಳಿಸಲು ಇಚ್ಛಿಸಿದ್ದರು.

ಮುಖ್ಯವೆಂದರೆ ಅವರಿಗೆ ಹಣವನ್ನು ಇರಿಸಿಕೊಳ್ಳುವ, ಚಲಾಯಿಸುವ, ಆಹಾರ ವಸ್ತುಗಳನ್ನು ಸಂಗ್ರಹಿಸುವ, ಹುಳಿ ಪೇಯಗಳನ್ನು ಕುಡಿಯುವ ಅಂದರೆ ಸಂನ್ಯಾಸಿಯ ವಿನಯ ನಿಯಮಗಳನ್ನು ಮುರಿಯುವುದಷ್ಟೇ ಅಲ್ಲ, ಪ್ರಾಪಂಚಿಕ ಸುಖಗಳನ್ನು ತ್ಯಾಗ ಮಾಡಿ ಪವಿತ್ರ ಬದುಕನ್ನು ಮಾಡಬೇಕೆಂಬ ಆಶಯವನ್ನೇ ಕೆಡಿಸುವುದು ಅವರ ಉದ್ದೇಶವಾಗಿತ್ತು. ಪಟಿಸಂಭಿದ ಜ್ಞಾನವನ್ನು ಹೊಂದಿದ ಪೂಜ್ಯ ಸಬ್ಬಕಾಮಿ ಮಹಾಥೇರರು ಈ ಸಂಗಾಯನದ ಸಾರಥ್ಯವನ್ನು ವಹಿಸಿ ಸಂಘದ ಪಾವಿತ್ರ್ಯತೆಯನ್ನು ಕಾಪಾಡಲು ಯಾವ ಹತ್ತು ಅಂಶಗಳನ್ನು ಸೇರಿಸಿ ಸರಳ ಸಂನ್ಯಾಸಿ ಬದುಕನ್ನು ಸಾಗಿಸಬೇಕೆಂದಿದ್ದರೋ ಅದನ್ನು ತಿರಸ್ಕರಿಸಿದರು.

ಎರಡನೇ ಸಂಗಾಯನವು ಏಳುನೂರು ಪಟಿಸಂಭಿದ ಅರ್ಹಂತರಿಂದ ಒಳಗೊಂಡಿದ್ದು ವೇಸಾಲಿಯ ಬಾಲುಕಾರಾಮದಲ್ಲಿ ಕಾಲಸೋಕ ರಾಜನ ನೆರವಿನಿಂದ ಎಂಟು ತಿಂಗಳ ಕಾಲ ನಡೆಯಿತು. ಆ ಹೊತ್ತಿಗೆ ಪೂಜ್ಯ ಸಬ್ಬಕಾಮಿಯವರಿಗೆ ನೂರ ಅರವತ್ತು ವರ್ಷ ವಯಸ್ಸಾಗಿತ್ತು. ಅವರು ಅರ್ಹಂತ ಮಹಾಥೇರ ಆಯುಷ್ಮಾನ್ ಯಸನಿಂದ ಉಪಸಂಪದಗೊಂಡವರಾಗಿದ್ದರು. ಯಸನು ಮೊದಲ ಪಂಚವಗ್ಗೀಯ ಭಿಕ್ಖುಗಳ ನಂತರ ಬಂದ ಆರನೇ ಅರ್ಹಂತ ಶಿಷ್ಯ ಬುದ್ಧನಿಗೆ ಆಯುಷ್ಮಾನ್ ಯಸನು, ಬೋಧಿಸತ್ವನಿಗೆ ಪಾಯಸವನ್ನು ಕೊಟ್ಟ ಮಹಾ ಉಪಾಸಿಕ ಸುಜಾತಳ ಮಗ. ಆ ಆಹಾರದಿಂದಲೇ ಬುದ್ಧ ನಲವತ್ತೊಂಬತ್ತು ದಿನಗಳ ಕಾಲ ಸಮಾಧಿ ಸ್ಥಿತಿಯಲ್ಲಿ ಮುಳುಗಿದ್ದನು.

ಯಾವ ಭಿಕ್ಖುಗಳನ್ನು ಸಂಘದಿಂದ ಬಿಡಿಸಿದರೋ, ಅವರೇ ಮುಂದೆ ಮಹಾ ಸಾಂಘಿಕವನ್ನು ಕಟ್ಟಿಕೊಂಡರು. ಇಲ್ಲಿಂದಲೇ ಭಿನ್ನಮತ ಆರಂಭವಾಗಿ ಗುಂಪುಗಳು ರೂಪುಗೊಂಡು ಮಹಾಸಾಂಘಿಕ, ಮಹಾಯಾನ ಇತ್ಯಾದಿ ಹುಟ್ಟಿಕೊಂಡವು. ಅಶೋಕನ ಕಾಲಕ್ಕೆ, ಅಂದರೆ ನೂರೈವತ್ತು ವರ್ಷಗಳ ನಂತರ ಮಹಾಯಾನ ಸಂನ್ಯಾಸಿಗಳಲ್ಲಿ ಹದಿನೆಂಟು ಗುಂಪುಗಳು ಆದವು. ಅವೆಲ್ಲಾ ಹೆಚ್ಚಾಗಿ ಮೇಲ್ವರ್ಗದ ಜಾತಿಯಿಂದ ಬಂದವರ ಗುಂಪುಗಳೇ ಆಗಿದ್ದವು. ಹೀಗೆ ಜಾತಿಯು ತನ್ನ ವಿಕಾರ ರೂಪವನ್ನು ತಳೆದು ಪ್ರಾಪಂಚಿಕ ವಾಸನೆಗಳತ್ತ ವಾಲಿದ ಜನರೇ ಹಲವಾರು ಮಹಾಯಾನ ಗುಂಪುಗಳು ಆದವು. ಭಾರತದಲ್ಲಿ ಬೌದ್ಧ ಧರ್ಮವು ಕ್ಷೀಣಿಸುವುದಕ್ಕೆ ಈ ರೀತಿಯ ಬೆಳವಣಿಗೆ ಕಾರಣವಾಗಿದೆ ಎನ್ನಬಹುದು.

ಮೂರನೆಯ ಸಂಗಾಯನವು ಬುದ್ಧ ಮಹಾ ಪರಿನಿಬ್ಬಾಣ ಹೊಂದಿದ ಇನ್ನೂರೈವತ್ತು ವರ್ಷಗಳ ನಂತರ ಪಾಟಲಿಪುತ್ತದಲ್ಲಿ ಮಹಾ ಬೌದ್ಧಾವಲಂಬಿಯಾದ ಚಕ್ರವರ್ತಿ ಅಶೋಕನ ಬೆಂಬಲದಿಂದ ನಡೆಯಿತು. ಈ ಮೂರನೇ ಸಂಗಾಯನದಲ್ಲಿ ಒಂದು ಸಾವಿರ ಪಟಿಸಂಭಿದ ಅರ್ಹಂತ ಥೇರರು ಒಂಭತ್ತು ತಿಂಗಳ ಕಾಲ ಇಡೀ ತಿಪಿಟಕವನ್ನು ಪಠಿಸಿದರು. ಪಾಟಲೀಪುತ್ತದ ಅಶೋಕಾರಾಮ ವಿಹಾರವು ಧಮ್ಮದೂತರನ್ನು ತಯಾರಿಸುವ ಮಹಾ ಕೇಂದ್ರವಾಗಿ ರಾಜ ಧಮ್ಮಾಶೋಕನ ಬೆಂಬಲದಿಂದ ನಡೆಯಿತು. ಈ ಸಂಗಾಯನವು ಯಾವ ಉದ್ದೇಶಕ್ಕಾಗಿ ನಡೆಯಿತೆಂದರೆ ಬಹಳಷ್ಟು ಮಂದಿ ಸಂನ್ಯಾಸಿಗಳು ಚೀವರವನ್ನು ಅನ್ಯ ಉದ್ದೇಶಗಳಿಗಾಗಿ ಧರಿಸಿದ್ದರು.

ರಾಜನು ಬುದ್ಧನ ಕಟ್ಟಾ ಅನುಯಾಯಿಯಾದ್ದರಿಂದ ಯಾರೆಲ್ಲಾ ಭಿಕ್ಖುಗಳಾಗಿದ್ದರೋ ಅವರನ್ನೆಲ್ಲಾ ತುಂಬಾ ಗೌರವದಿಂದ ನೋಡುತ್ತಿದ್ದನು. ಆ ಸಂದರ್ಭದಲ್ಲಿ ಅರವತ್ತು ಸಾವಿರ ಭಿಕ್ಖು ವೇಷದ ಕಪಟ ಸಂನ್ಯಾಸಿಗಳು ಉನ್ನತ ಜಾತಿಗಳಿಂದ ಬಂದವರಾಗಿದ್ದು, ಪಾರಿವ್ರಾಜಕರು, ಮೋಸಗಾರರು, ಬೌದ್ಧ ಸಂನ್ಯಾಸಿಯ ವೇಷಗಳನ್ನು ಹಾಕಿಕೊಂಡು ಸಾರ್ವಜನಿಕರನ್ನು ಮೋಸಗೊಳಿಸುತ್ತಾ ಉತ್ತಮ ಜೀವನ ನಡೆಸುವವರಾಗಿದ್ದರು. ಮೊದಮೊದಲು ಜನ ಅವರನ್ನು ಸಹಿಸಿಕೊಂಡರು, ಆನಂತರದಲ್ಲಿ ಅವರು ಸಮಸ್ಯೆಗಳನ್ನು ಸೃಷ್ಟಿಸಿ ವಿಹಾರದಲ್ಲಿರುವ ನಿಜವಾದ

ಸಂನ್ಯಾಸಿಗಳಿಗೆ ಮಾರಕವಾದರು. ರಾಜ ಅಶೋಕನು ಇವರ ಬಗ್ಗೆ ನಿರಂತರವಾಗಿ ದೂರುಗಳನ್ನು ಪಡೆಯುತ್ತಿದ್ದು ಈ ಬಗ್ಗೆ ಏನಾದರೂ ಮಾಡಬೇಕೆಂದುಕೊಂಡನು.

ಈ ಸೋಗಿನ ಸಂನ್ಯಾಸಿಗಳನ್ನು ನೀತಿ ಬಾಹಿರವಾಗಿದ್ದರಷ್ಟೇ ಅಲ್ಲ, ವ್ಯತಿರಿಕ್ತ ದೃಷ್ಟಿಕೋನದವರಾಗಿದ್ದು, ಬುದ್ಧನ ಹೆಸರಿನಲ್ಲಿ ದೋಷಪೂರಿತ ಉಪದೇಶಗಳನ್ನು ಮಾಡಿ ಧಮ್ಮ ಮತ್ತು ವಿನಯವನ್ನು ಕಲುಷಿತಗೊಳಿಸಿದ್ದರು. ಆದ್ದರಿಂದ ಬುದ್ಧ ಧರ್ಮದ ಪಾವಿತ್ರ್ಯತೆಯನ್ನು ಕಾಪಾಡಲು ಮತ್ತು ಈ ಕಳ್ಳ ಸಂನ್ಯಾಸಿಗಳನ್ನು ಹೊರಹಾಕಲು ಏನಾದರೂ ಮಾಡಬೇಕಾಯಿತು. ಆದ್ದರಿಂದ ಮಹಾರಾಜ ಅಶೋಕನು ತನ್ನ ಗುರುವಾದ ಪಟಿಸಂಭಿದ ಅರ್ಹಂತ ಮೊಗ್ಗಲಪುತ್ತ ತಿಸ್ಸರ ಬಳಿ ಹೋಗಿ ಸಂಘದಿಂದ ಈ ಸೋಗಿನ ಸಂನ್ಯಾಸಿಗಳನ್ನು ಹೊರಹಾಕುವಂತೆ ವಿನಂತಿಸಿದ.

ಬುದ್ಧರು ಪರಿನಿಬ್ಬಾಣಗೊಂಡು ಇನ್ನೂರೈವತ್ತು ವರ್ಷಗಳು ಗತಿಸಿದ್ದರಿಂದ ಪೂಜ್ಯರಾದ ಅರ್ಹಂತ ಮೊಗ್ಗಲಿಪುತ್ತ ತಿಸ್ಸ ಮಹಾಥೇರರು ಪಾಟಲಿಪುತ್ತದ ಅಶೋಕಾರಾಮದಲ್ಲಿ ಎಲ್ಲಾ ಭಿಕ್ಷುಗಳಿಗಾಗಿ ಒಂದು ಪರೀಕ್ಷೆಯನ್ನು ಇಟ್ಟರು. ಈ ಭಿಕ್ಖುಗಳಲ್ಲಿ ಸೋಗು ಸಂನ್ಯಾಸಿಗಳೂ ಸೇರಿದ್ದರು. ಇದು ಕೇವಲ ಪಾಟಲೀಪುತ್ತದಲ್ಲಿ ಮಾತ್ರವಷ್ಟೇ ಅಲ್ಲ, ಬೇರೆ ಕಡೆಯೂ ಆಯೋಜಿಸಲಾಗಿತ್ತು. ಇದರಲ್ಲಿ ಪ್ರತಿಯೊಬ್ಬ ಬೌದ್ಧ ಸಂನ್ಯಾಸಿಯನ್ನು ಅವನ ನಂಬಿಕೆ, ಸಾಧನೆ, ನಡವಳಿಕೆ ಮತ್ತು ಬದುಕಿನ ರೀತಿಯ ಬಗ್ಗೆ ಸಂದರ್ಶಿಸುವುದಾಗಿತ್ತು. ಕೆಲವು ಲಕ್ಷ ಸಂನ್ಯಾಸಿಗಳ ಪೈಕಿ ಅರವತ್ತು ಸಾವಿರ ಸಂನ್ಯಾಸಿಗಳನ್ನು ಕಪಟಿಗಳೆಂದು ಗುರುತಿಸಿ ಅವರನ್ನು ಸಂಘದಿಂದ ಹೊರಹಾಕಲಾಯಿತು. ಸಾರ್ವಜನಿಕವಾಗಿ ಅವರನ್ನು ಸಂಘದಿಂದ ಹೊರಹಾಕಿದ ಮೇಲೆ ಅವರು ಸುಖವಾದ ಬದುಕನ್ನು ನಡೆಸಲು ಅವರಿಗೆ ಕೆಲಸವನ್ನು ಮತ್ತು ಬೇರೆ ರೀತಿಯ ಜೀವನೋಪಾಯಗಳನ್ನು ತೋರಿಸಿಕೊಟ್ಟರು. ಇವರೆಲ್ಲರೂ ಚೆನ್ನಾಗಿ ಬೆಂಬಲಿತರಾದುದರಿಂದ ಶಾಂತ ಮನಸ್ಸಿನವರಾಗಿದ್ದರು. ಅರ್ಹಂತ ಮೊಗ್ಗಲಿಪುತ್ತ ತಿಸ್ಸರು 'ಕಥಾವತ್ಥು' ಎಂಬ ಹೆಸರಲ್ಲಿ ಒಂದು ಅಮೂಲ್ಯವಾದ ಧಾರ್ಮಿಕ ಗ್ರಂಥವನ್ನು ಬರೆದು ಅದರಲ್ಲಿ ಒಂದು ಸಾವಿರ ಪ್ರಶ್ನೆಗಳನ್ನು ಮತ್ತು ಉತ್ತರಗಳನ್ನು ಕೊಟ್ಟು ಸಂಘಕ್ಕೆ ಯಾರು ನೈಜವಾದ ಭಿಕ್ಖು, ಯಾರು ಅಲ್ಲ ಎಂಬುದನ್ನು ಗುರುತಿಸಲು ಆಗುವಂತೆ ಮಾಡಿದರು. ಇದರ ಮೂಲ ಉದ್ದೇಶವೆಂದರೆ ಬುದ್ಧನ ಮೂಲ ಉಪದೇಶಗಳನ್ನು ಸಂರಕ್ಷಿಸುವುದು.

ನಾಲ್ಕನೇ ಮಹಾ ಸಂಗಾಯನವು ಭಾರತದಲ್ಲಿ ನಡೆಯಲಿಲ್ಲ. ಶ್ರೀಲಂಕಾದಲ್ಲಿ ಬುದ್ಧನು ಮಹಾಪರಿನಿಬ್ಬಾಣವಾದ ೪೫೦ ವರ್ಷಗಳ ನಂತರ ಮಾತಲೆ ಪರ್ವತದ ಬಳಿ ಇರುವ ಆಲುವಿಹಾರದ ಅಲೋಕ ಗುಹೆಯಲ್ಲಿ ನಡೆಯಿತು. ಪೂಜ್ಯ ರಕ್ಖತ ಮಹಾಥೇರರು ಈ ಸಂಗಾಯನದ ಅಧ್ಯಕ್ಷರಾಗಿದ್ದು, ಐದು ನೂರು ಅರ್ಹಂತ ಥೇರರು ಸೇರಿದ್ದರು. ರಾಜವಟ್ಟ ಗಮನಿ ಅಭಯನು ಈ ಸಂಗಾಯನಕ್ಕೆ ಪೂರ್ಣ ಬೆಂಬಲವನ್ನು ಕೊಟ್ಟಿದ್ದನು. ಈ ಸಂಗಾಯನದ ಅವಶ್ಯಕತೆ ಏಕೆ ಬಂದಿತೆಂದರೆ ಯುದ್ಧ ಹಾಗು ಶತ್ರು ರಾಜನೊಬ್ಬನು ಬೌದ್ಧರನ್ನು ಕೊಂದು ಹಾಕುತ್ತಿದ್ದುದರಿಂದ ಮತ್ತು ಬೌದ್ಧ ವಿಹಾರಗಳನ್ನು ನಾಶಪಡಿಸುತ್ತಿದ್ದುದರಿಂದ ಭೋಗವಾದವೇ ಹೆಚ್ಚಾಗಿ ನೈತಿಕಪತನವಾಯಿತು. ಈ ಸಂಗಾಯನದಲ್ಲಿ ತಿಪಿಟಕ ಪಠಣ ಮಾತ್ರ ಆಗದೆ ಅದನ್ನು ಲಿಖಿತ ರೂಪಕ್ಕೆ ತಂದು ಅದನ್ನು ಬಾಹ್ಯ ಯುದ್ಧ ಮೊದಲಾದವುಗಳಿಂದ ತಪ್ಪಿಸಿತು. ಇಡೀ ತಿಪಿಟಕವನ್ನು ಮೊದಲಬಾರಿಗೆ ಹತ್ತಾರುಜನ ಪಂಡಿತರು ಓಲೆಗರಿಗಳ ಮೇಲೆ ಬರೆದರು. ಹೀಗೆ ತಿಪಿಟಕವು ಮೊದಲಬಾರಿಗೆ ಕ್ರಿ.ಶ. ಮೊದಲನೇ ಶತಮಾನದಲ್ಲಿ ಲಿಖಿತರೂಪವನ್ನು ತಳೆಯಿತು. ಮಹಿಂದ ಥೇರನು ಶ್ರೀಲಂಕಾಕ್ಕೆ ಬಂದು ಬೌದ್ಧ ಧರ್ಮವನ್ನು ಬಿತ್ತಿ ಪ್ರಬಲವಾಗಿ ಬೆಳೆಸಿ ಬುದ್ಧ ಶಾಸನವನ್ನು ರಕ್ಷಿಸಿ ಅದನ್ನು ಮುಂದುವರಿಸುವುದಕ್ಕೆ ಈ ಲಿಖಿತ ತಿಪಿಟಕವು ನೆರವಾಯಿತು.

ಬೌದ್ಧ ಭಿಕ್ಷುಗಳು ಮತ್ತು ಆನಂತರ ಬಂದ ರಾಜರುಗಳು ಧಮ್ಮವನ್ನು ಉಳಿಸಿ ಬೆಳೆಸುವುದಕ್ಕಾಗಿ ಶ್ರಮಿಸಿದರು. ಮಹಿಂದ ಥೇರರು ಪರಿನಿಬ್ಬಾಣ ಹೊಂದಿದ ನೂರಿಪ್ಪತ್ತೈದು ವರ್ಷಗಳ ನಂತರ ದಕ್ಷಿಣ ಭಾರತದ ಚೋಳರಾಜನ ಆಕ್ರಮಣದಿಂದ ಶ್ರೀಲಂಕಾವು ಯುದ್ಧ, ಕ್ಷಾಮ, ಪೀಡೆಗಳಿಗೆ ತುತ್ತಾಯಿತು. ಸಂಘವು ಪವಿತ್ರ ಪ್ರದೇಶವಾದ ಅನುರಾಧಪುರವನ್ನು ತೊರೆದು ವನಗಳಿಂದ ಕೂಡಿದ ಕಾಂಡಿ ಪರ್ವತ ಪ್ರದೇಶಕ್ಕೆ ಹೋಯಿತು. ವಿದೇಶಿ ಆಕ್ರಮಣದಿಂದಾಗಿ ಅಲ್ಲಿ ಅರ್ಹಂತರು ತಮ್ಮ ಧಮ್ಮ ಭಂಡಾರವನ್ನು ಉಳಿಸಿಕೊಳ್ಳಲು ಕಷ್ಟ–ನಷ್ಟಗಳನ್ನು ಸಹಿಸಿಕೊಳ್ಳಬೇಕಾಯಿತು. ಆಲುವಿಹಾರದ ದೂರದ ಗುಹೆಯೊಂದರಲ್ಲಿ ಐದು ನೂರು ಭಿಕ್ಖುಗಳು ಸೇರಿ ಅದರ ಅಧ್ಯಕ್ಷತೆಯನ್ನು ಪೂಜ್ಯ ರಕ್ಖಿತ ಮಹಾಥೇರರು ವಹಿಸಿಕೊಂಡರು. ಅಲ್ಲಿ ಇಡೀ ತಿಪಿಟಕವನ್ನು ಪಠಿಸುವುದೊಂದೇ ಅಲ್ಲ, ಯಾವ ಮಹಿಂದ ಥೇರರು ಮತ್ತು ಸಂಗಡಿಗರು ಎಲ್ಲವನ್ನೂ ಅಂದರೆ ತಿಪಿಟಕ ಮತ್ತು ಟೀಕೆಗಳನ್ನು

ಭಾರತದಿಂದ ತಂದರೋ ಅವೆಲ್ಲವನ್ನೂ ಬರಹರೂಪಕ್ಕೆ ಇಳಿಸಿದರು.

ರಾಜ ವತ್ತಗಾಮಿನಿ ಅಭಯನು ನಾಲ್ಕನೇ ಸಂಗಾಯನಕ್ಕೆ ಬೇಕಾದ ಎಲ್ಲ ವ್ಯವಸ್ಥೆಯನ್ನು ಮಾಡಿ ರಾಜನ ಮಹಾಮಂತ್ರಿ ಮತ್ತು ರಾಜಲೇಖಕ ಅಡಿಗೂರನನ್ನು ಉಸ್ತುವಾರಿ ಅಧಿಕಾರಿಯನ್ನಾಗಿ ಮಾಡಿದ್ದನು. ಓಲೆಗರಿಗಳ ಮೇಲೆ ಬರೆದ ಹಸ್ತಲೇಖನವನ್ನು ಅರ್ಹಂತರು ನೂರು ಬಾರಿಯಾದರೂ ಪರಿಶೀಲಿಸಿ ಆನಂತರವೇ ಮುದ್ರಿಸಿ ಅವನ್ನು ಅಧಿಕೃತ ತಿಪಿಟಕ ಮತ್ತು ಅಟ್ಠಕಥಾಗಳೆಂದು ಹೊರಡಿಸಿದರು. ಈ ಲಿಖಿತ ದಾಖಲೆಗಳನ್ನೇ ನಮ್ಮ ಕಾಲದವರೆಗೂ ಭಕ್ತಿ ಶ್ರದ್ಧೆಗಳಿಂದ ರಾಜ ಸಂತತಿಯವರು ಮತ್ತು ಮಹಾ ಸಂಘದ ಹಿರಿಯ ಥೇರರು ಕಾಪಾಡಿಕೊಂಡು ಬಂದಿದ್ದಾರೆ. ಐದನೇ ಮಹಾ ಸಂಗಾಯನವು ಬುದ್ಧನು ಮಹಾ ಪರಿನಿಬ್ಬಾಣ ಹೊಂದಿದ ೨೪೧೪ ವರ್ಷಗಳ ನಂತರ ಎಂದರೆ ೧೮೭೧ರಲ್ಲಿ ಮಯನ್ಮಾರಿನ ರಾಜ ಮಿಂದಾನ್ ಮಿನ್‌ನ ಆಶ್ರಯದಲ್ಲಿ ನಡೆಯಿತು. ಮೊದಲಿಗೆ ತಿಪಿಟಕಗಳನ್ನು ಮತ್ತು ಅಟ್ಠಕಥಾಗಳನ್ನು ಐದು ತಿಂಗಳ ಕಾಲ ವಿದ್ವಾಂಸ ಥೇರರು ಮಂಡಾಲೆಯ ದಕ್ಖಿಣಾರಾಮ ವಿಹಾರದಲ್ಲಿ ಪಠಿಸಿದರು. ಆನಂತರ ಪಠಣ ಭಾಗಗಳನ್ನು ೭೨೯ ಅಮೃತ ಶಿಲೆಗಳ ಮೇಲೆ ಕೆತ್ತಿಸಿ ಅವನ್ನು 'ಗುಪ್ತ ಗ್ರಂಥ ಭಂಡಾರ'ದಲ್ಲಿ ಇರಿಸಲಾಯಿತು. ಪ್ರತಿ ಶಿಲೆಯನ್ನು ಸುಂದರ ಪಗೋಡ ಶೈಲಿಯ ಪೆಂಡಾಲಿನಲ್ಲಿ ಇರಿಸಿ ಇಂದಿಗೂ ಅವನ್ನು ಜತನ ಮಾಡಿಕೊಂಡು ಬರಲಾಗಿದೆ. ಈ ಐದನೇ ಮಹಾ ಸಂಗಾಯನವನ್ನು ಮೂವರು ಮಹಾಥೇರರು ಪೂಜ್ಯರಾದ ಜಾಗರಾಭಿವಂಶ, ನರೇಂದ್ರಭಿದಜ ಮತ್ತು ಸುಮಂಗಲಸಾಮಿ ಇವರುಗಳು ಒಬ್ಬರಾದ ಮೇಲೆ ಒಬ್ಬರಂತೆ ಅಧ್ಯಕ್ಷತೆ ವಹಿಸಿ ಪ್ರತಿಯೊಂದರಲ್ಲೂ ಇಪ್ಪತ್ತನಾಲ್ಕು ಸಾವಿರ ವಿದ್ವಾಂಸ ಥೇರರು ಭಾಗವಹಿಸಿದ್ದರು.

ಈ ಐದನೇ ಸಂಗಾಯನದ ಉದ್ದೇಶವೆಂದರೆ ಬುದ್ಧ ಶಾಸನವನ್ನು ಬಹಳಕಾಲ ಉಳಿಸಿಕೊಳ್ಳುವ ಸಲುವಾಗಿ ಶಿಲಾಲೇಖ ಮಾಡಿಸುವುದು ಮತ್ತು ತಿಪಿಟಕಗಳು ಒಂದೇ ಮಾದರಿಯಲ್ಲಿ ಸಂಪಾದಿತವಾಗಿ ಹೊರತರುವುದು.

**ಆರನೇ ಮಹಾ ಸಂಗಾಯನ**

ಬುದ್ಧನ ೨೫೦೦ನೇ ಜಯಂತಿಯನ್ನು ಸಂಪನ್ನಗೊಳಿಸಲು ೧೯೫೪ರ ಮೇ ತಿಂಗಳಿನಲ್ಲಿ ಅಂತರರಾಷ್ಟ್ರೀಯ ಮಹಾ ಸಂಘವು ೨೫೦೦ ವಿದ್ವಾಂಸ ಥೇರರನ್ನು ಬೌದ್ಧ ದೇಶಗಳಾದ ಮಯನ್ಮಾರ್, ಥೈಲಾಂಡ್, ಶ್ರೀಲಂಕಾ, ಲಾವೋಸ್, ಕಾಂಬೋಡಿಯ, ಭಾರತ, ಬಾಂಗ್ಲಾದೇಶ ಮತ್ತು ಇತರೆ ದೇಶಗಳಾದ ಚೈನಾ, ಜಪಾನ್, ನೇಪಾಳ್ ಮುಂತಾದ ದೇಶಗಳಿಂದ ಆಹ್ವಾನಿಸಿ ಆರನೇ ಸಂಗಾಯನವನ್ನು ಮಯನ್ಮಾರ್ ಸರ್ಕಾರವು ಯಾಂಗೊನ್‌ನಲ್ಲಿ ನಡೆಸಿತು. ಪ್ರಧಾನ ಮಂತ್ರಿಗಳಾದ ಯೂನೂ ಅವರು ಈ ಸಂಗಾಯನವನ್ನು ಆಯೋಜಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಈ ಸಂಗಾಯನದ ಮೂಲಕ ತಿಪಿಟಕ, ಅಟ್ಠಕಥಾ ಮತ್ತು ಟೀಕಾಗಳು ಮಯನ್ಮಾರ್ ಭಾಷೆಯಲ್ಲಿ ಸಾಕಷ್ಟು ಪರಿಷ್ಕೃತಗೊಂಡವು. ಈ ಸಂಗಾಯನದ ಸಮಾರೋಪ ದಿನವು ೧೯೫೬ರ ಮೇ ತಿಂಗಳ ವೈಶಾಖ ತುಂಬು ಹುಣ್ಣಿಮೆಯ ದಿನವಾಗಿದ್ದು, ಭಗವಾನ್ ಬುದ್ಧರ ೨೫೦೦ನೇ ವರ್ಷದ ಮಹಾ ಪರಿನಿಬ್ಬಾಣದ ದಿನವಾಗಿತ್ತು. ಈ ಆರನೇ ಸಂಗಾಯನವು ೧೯೫೪-೫೬ರಲ್ಲಿ ಯಾಂಗೊನ್ ಬಳಿ ಇರುವ ಮಹಾಪಸನ್ನ ಗುಹೆಯಲ್ಲಿ ಪೂಜ್ಯ ರೇವತ ಮಹಾಥೇರರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೇಲಿನ ಘಟನೆಗಳಿಂದ ತಿಳಿದುಬರುವುದೇನೆಂದರೆ ಮೊದಲನೇ ಸಂಗಾಯನದಲ್ಲಿ ಬುದ್ಧನ ಮೂಲ ಧಮ್ಮೋಪದೇಶಗಳ ಪಾವಿತ್ರ್ಯತೆಯನ್ನು ಹಾಗೆಯೇ ಉಳಿಸಿಕೊಂಡು ಬರಲು ಪವಿತ್ರ ಪಾಳಿ ಗ್ರಂಥವನ್ನು ಅಧಿಕೃತವಾಗಿ ಕ್ರೋಢೀಕರಿಸಿ ಸ್ಥಾಪಿಸಲಾಯಿತು. ಎರಡನೇ ಸಂಗಾಯನದಲ್ಲಿ ವಿನಯ ಪಿಟಕದಲ್ಲಿ ಸಂನ್ಯಾಸಿ ನಿಯಮಗಳ ಬಗ್ಗೆ ಹುಟ್ಟಿಕೊಂಡ ಗೊಂದಲಗಳನ್ನು ಸಂಪೂರ್ಣವಾಗಿ ನಿವಾರಿಸಲಾಯಿತು; ಮೂರನೆಯದರಲ್ಲಿ ಆಧ್ಯಾತ್ಮಿಕ ಪ್ರಕ್ಷಿಪ್ತತೆಗಳು ಮತ್ತು ಮನೋವೈಜ್ಞಾನಿಕ ಊಹಾಪೋಹಗಳನ್ನು ಮೂಲದಲ್ಲೇ ಉಚ್ಚಾಟಿಸಿ ಬುದ್ಧ ಧರ್ಮವನ್ನು ಪುನರ್ ಸ್ಥಿರೀಕರಿಸಲಾಯಿತು; ನಾಲ್ಕನೇ ಸಂಗಾಯನದಲ್ಲಿ ತಿಪಿಟಕ ಮತ್ತು ಅಟ್ಠಕಥೆಗಳನ್ನು ಓಲೆಗರಿಗಳಲ್ಲಿ ಬರೆಸಲಾಯಿತು.

ಹಿಗೆ ಥೇರವಾದ ಭಿಕ್ಖು ಸಂಘವು ಬುದ್ಧನ ಮೂಲ ಬೋಧನೆಗಳನ್ನು ಸಮರ್ಥವಾಗಿ ಸಂರಕ್ಷಿಸಿಕೊಂಡು ಬಂದು ಮುಂದೆ ತಿಪಿಟಕದ ಗ್ರಂಥ ಸಾಹಿತ್ಯವು ಭದ್ರವಾಗಿ ನೆಲೆಯೂರಿ ಬೆಳೆಯಲು ಅವಕಾಶ ಮಾಡಿಕೊಟ್ಟಿತು. ನಾಲ್ಕು ಮತ್ತು ಐದನೇ ಸಂಗಾಯನಗಳು ಪಾಳಿ ಪವಿತ್ರ ಗ್ರಂಥಗಳನ್ನು ಓಲೆಗರಿ ಮತ್ತು ಶಿಲೆಗಳ ಮೇಲೆ ಬರೆಯಿಸಿ ಕೆತ್ತಿಸುವುದರ ಮೂಲಕ ಸ್ಥಿರಗೊಳಿಸಿತು.

ಆರನೇ ಸಂಗಾಯನವು ಧಮ್ಮೋಪದೇಶಗಳನ್ನು ಪ್ರಪಂಚದಾದ್ಯಂತ ಬಿತ್ತಲು ಒತ್ತು ನೀಡಿತು. ಇಂದು ಪಾಳಿ ತಿಪಿಟಕ ಗ್ರಂಥಗಳು ಹತ್ತಾರು ಪೌರಾತ್ಯ ಪಾಶ್ಚಿಮಾತ್ಯ ಭಾಷೆಗಳಲ್ಲಿ ಅನುವಾದಗೊಂಡಿವೆ. ಭಾರತದಲ್ಲಿಯೇ ಇಂದು ಭಗವಾನ್ ಬುದ್ಧ ಪಾಳಿ ವಿಶ್ವವಿದ್ಯಾಲಯ ಮತ್ತು ಥೇರವಾದ ಬೌದ್ಧ ಧಮ್ಮವು ದೂರ ಶಿಕ್ಷಣದ ಮೂಲಕ ಹತ್ತು ಭಾಷೆಗಳ ಕಾರ್ಯಜಾಲವನ್ನು ಹಮ್ಮಿಕೊಂಡು ಹೆಜ್ಜೆಯನ್ನಿಟ್ಟಿದೆ.

ಬುದ್ಧನು ತನ್ನ ಉಪದೇಶಗಳನ್ನು ಛಂದಸ್ಸಿನ ಬದಲು ಜನರ ಆಡುಭಾಷೆಯಾದ ಪಾಳಿಯಲ್ಲಿ 'ಬಹುಜನರ ಹಿತಕ್ಕಾಗಿ ಸುಖಕ್ಕಾಗಿ ಮತ್ತು ಲೋಕಾನುಕಂಪಕ್ಕಾಗಿ' ಬೋಧಿಸಿದರು ಎಂಬುದನ್ನು ಈಗಾಗಲೇ ಮೇಲೆ ಹೇಳಿದೆ. ಪಾಳಿಯು ಬುದ್ಧನ ಕಾಲದಲ್ಲಿ ಸಾಮಾನ್ಯ ಜನರ ಭಾಷೆಯಾಗಿದ್ದು ಎಲ್ಲರಿಗೂ ಅರ್ಥವಾಗುತ್ತಿತ್ತು. ಒಂದುವೇಳೆ ಬುದ್ಧ ವೇದ ಸಂಸ್ಕೃತ ಭಾಷೆಗೆ ಸಮ್ಮತಿಸಿದ್ದರೆ ಪರಮಜ್ಞಾನ ಭಂಡಾರವಾದ ತಿಪಿಟಕವು ಕೇವಲ ಕೆಲವೇ ಜನರಿರುವ ಉನ್ನತ ವರ್ಗದವರಿಗೆ, ವಿದ್ವಾಂಸರಿಗೆ, ಪುರೋಹಿತರಿಗೆ ಮತ್ತು ಶ್ರೀಮಂತರಿಗೆ ಸೀಮಿತವಾಗುತ್ತಿತ್ತು. ಧಮ್ಮದ ಅಂತರಾಳವೆಂದರೆ ಅದು ಎಲ್ಲರಿಗೂ ಒಳಿತು ಮಾಡುವಂತಹದು. ಅರ್ಥಾತ್ ಅಂತಿಮ ಸತ್ಯವಾದ ನಿಬ್ಬಾಣವೇ ಅದರ ಗುರಿ. ಆ ನಿಬ್ಬಾಣವನ್ನು ನಾವೇ ಪರೀಕ್ಷಿಸುವಂತಹುದು. ಆಸ್ತಿಕ ಧಮ್ಮಗಳಲ್ಲಿರುವಂತೆ ಯಾವುದೋ ದೇವವಾಣಿ, ಆದ್ದರಿಂದ ಅದನ್ನು ಪ್ರಶ್ನಿಸಬಾರದು ಎನ್ನುವಂತೆ ಬೌದ್ಧ ಧರ್ಮದಲ್ಲಿಲ್ಲ.

ಬೌದ್ಧ ಧರ್ಮವು ಒಂದು ದೈವ ಶಕ್ತಿಯಿಂದ ಹೊರಬಂದುದಲ್ಲ, ಆದರೆ ಇದು ಸರ್ವಜ್ಞನಾದ ಬುದ್ಧನಿಂದ ಬೋಧಿ ಜ್ಞಾನೋದಯದ ಮೂಲಕ ಅಂತಿಮ ಸತ್ಯವನ್ನು ಕಂಡಿಹಿಡಿಯಲ್ಪಟ್ಟ ಮತ್ತು ಹೀಗೆ ಕಂಡುಹಿಡಿದ ಮೇಲೆ ಸಮ್ಮಾ ಸಂಬುದ್ಧನಾಗಿ ದೇವ ಮಾನವರಿಗೂ ಗುರುವಾದರು. ಧಮ್ಮದ ಮೂಲವೆಂದರೆ ಸಮ್ಮಾ ಸಂಬುದ್ಧನೇ ತನ್ನ ಸ್ವಂತ ಸಮಾಧಿಯಿಂದುದಯವಾದ ಪ್ರಜ್ಞೆಯಿಂದ ಸರ್ವಜ್ಞನೂ, ಸ್ವಯಂಭುವೂ ಮತ್ತು ಚತುರಾರ್ಯ ಸತ್ಯಗಳ ಸಂಶೋಧಕನೂ ಆದ. ಆನಂತರದಲ್ಲಿ ಮೇರೆ ಇರದ ಕರುಣೆಯಿಂದ ಎಲ್ಲರ ಹಿತಕ್ಕಾಗಿ ಮತ್ತು ಸುಖಕ್ಕಾಗಿ ಧಮ್ಮವನ್ನು ದೇವತೆಗಳಿಗೂ ಮತ್ತು ಮಾನವರಿಗೂ ಬೋಧಿಸಿದನು. ಆದ್ದರಿಂದ ಬುದ್ಧನು ದೇವರಲ್ಲ; ಒಬ್ಬ ಅಪ್ರತಿಮ ಸಂಶೋಧಕ ಮತ್ತು ಗುರುವು ಮತ್ತು ಆಧ್ಯಾತ್ಮಿಕ ಉನ್ನತಿಯ ಸ್ಥಿತಿಯಿಂದ ಹುಟ್ಟಿದವರು. ಯಾರು ಸಾಧಕರಿದ್ದರೋ ಅವರು ಧಮ್ಮವನ್ನು ತಮ್ಮ ಒಳಿತಿಗಾಗಿಯೇ ಅರಿಯಬೇಕಾದರೆ ಧಮ್ಮದ ಹಲವಾರು ವರ್ಗಗಳನ್ನು ತಿಳಿಯಬೇಕು.

ಬುದ್ಧನು ಧಮ್ಮವನ್ನು ಹೀಗೆ ಅರ್ಥೈಸಿದ್ದಾನೆ: ೧) ಚತ್ತಾರಿ ಅರಿಯ ಸಚ್ಚಾನಿ–ನಾಲ್ಕು ಆರ್ಯ ಸತ್ಯಗಳು; ೨) ಮಜ್ಝಿಮಾ ಪಟಿಪದಾ–ಇಂದ್ರಿಯ ಭೋಗಗಳಲ್ಲೇ ನಿರತರಾಗಿರುವ ಮತ್ತು ಕಠೋರ ಆಧ್ಯಾತ್ಮ ವ್ರತ ನಿಯಮಗಳಲ್ಲೇ ಇರುವ ಎರಡು ಅತಿರೇಕಗಳನ್ನು ತೊರೆದು ಮಧ್ಯಮ ಮಾರ್ಗವನ್ನು ಅನುಸರಿಸುವುದು; ೩) ಅರಿಯ ಅಟ್ಠಂಗಿಕ ಮಗ್ಗೋ–ಆರ್ಯ ಅಷ್ಟಾಂಗ ಮಾರ್ಗ. ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಚನ, ಸಮ್ಯಕ್ ಕರ್ಮ, ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ ಮತ್ತು ಸಮ್ಯಕ್ ಸಮಾಧಿ. ಹೀಗೆ ಇಲ್ಲಿ ಯಾವುದೇ ಆಧ್ಯಾತ್ಮಿಕ ಅಥವಾ ಮಾನಸಿಕ ಊಹಾಪೋಹಗಳಿಲ್ಲ ಅಥವಾ ಬಾಹ್ಯವಾದ, ಸಂಸ್ಕಾರ ವ್ರತ ನಿಯಮಗಳು ಇಲ್ಲ; ಧರ್ಮದ ಹೆಸರಿನಲ್ಲಿ ಸಮಾಜವನ್ನು ವಿಭಜಿಸುವ ಜಾತಿಪದ್ಧತಿಗಳಿಲ್ಲ ಅಥವಾ ಸೃಷ್ಟಿಕರ್ತ ದೇವರು, ಆತ್ಮ ಇತ್ಯಾದಿಗಳಿಲ್ಲ.

ಆದ್ದರಿಂದ 'ಬುದ್ಧವಚನ'ವನ್ನು ಹೀಗೆ ವರ್ಗೀಕರಿಸಲಾಗಿದೆ. **ಪರಿಯತ್ತಿ ಸಾಸನ**–ಜ್ಞಾನವನ್ನು ಅರಿಯುವುದು ಅಥವಾ ತಿಳಿಯುವುದು; **ಪಟಿಪತ್ತಿ ಸಾಸನ**–ಅರಿತ ಜ್ಞಾನವನ್ನು ಸಾಧನೆಗೆ ಹಚ್ಚುವುದು; **ಪಟಿವೇಧ ಸಾಸನ**–ಸಾಧನೆಯಿಂದ ಸ್ವಾನುಭವ ಪಡೆದು ಅಂತಿಮ ಸತ್ಯವನ್ನು ಕಂಡುಕೊಳ್ಳುವುದು.

ಥೇರವಾದವನ್ನು ಹಿರಿಯರು ನೀಡಿದ ಬೋಧನೆ ಎಂತಲೂ ಕರೆಯುತ್ತಾರೆ. ಇವರು ತಾವು ಅರಿತ ಜ್ಞಾನವನ್ನೂ, ಸಾಧನೆಯನ್ನೂ ಮತ್ತು ಸಾಕ್ಷಾತ್ಕಾರವನ್ನೂ ಗುರು–ಶಿಷ್ಯ ಪರಂಪರೆಯ ಮೂಲಕ ಮುಂದಕ್ಕೆ ಕೊಂಡೊಯ್ಯುತ್ತಾರೆ. ಹಾಗೆಯೇ ಧಮ್ಮ–ವಿನಯವೂ. ಎಂದರೆ ಧರ್ಮ ಮತ್ತು ಆ ಧರ್ಮವನ್ನು ಕಾಪಾಡಲು ಬೇಕಾದ ಆಧ್ಯಾತ್ಮಿಕ ಶಿಸ್ತು. 'ತಿಪಿಟಕ' ಎಂಬ ವರ್ಗೀಕರಣವೇ ಒಂದು ಅಲಂಕಾರಿಕ ಪದ. 'ಮೂರು ಬುಟ್ಟಿಗಳು'. ಇನ್ನು ಬೇರೆ ವರ್ಗೀಕರಣಗಳಿವೆ ಉದಾ: ನವಾಂಗ ದೇಸನ ಎಂದರೆ ಒಂಭತ್ತು ಬಗೆಯ ಬೋಧನೆ ಅಥವಾ ಒಂಭತ್ತು ಸಾಹಿತ್ಯ ರೂಪದ ಪಾಳಿ ಗ್ರಂಥಗಳು ಹಾಗೂ ಶ್ರಾವಕರ ಮನೋಧರ್ಮಕ್ಕೆ ಒಗ್ಗುವ ವಿಧವಿಧವಾದ ಒಂಭತ್ತು ವಿಧದ ಧಮ್ಮ ಬೋಧನೆಗಳು.

ಇನ್ನು ಮೂರುಬಗೆಯ ಪರಿಯತ್ತಿ, ಪಟಿಯತ್ತಿ ಪಟಿವೇಧ ಸಾಸನಗಳ ವಿವರಕ್ಕೆ ಬಂದರೆ ಅರಿಯುವುದು ತಿಪಿಟಕ ಗ್ರಂಥಗಳಲ್ಲಿ ಬೋಧಿತವಾಗಿರುವ ಜ್ಞಾನವನ್ನು ಅರಿಯುವುದು ಎಂದರ್ಥ. ಅವುಗಳಲ್ಲಿ ಬುದ್ಧನ ಮೂಲ ಬೋಧನೆಗಳು ಅಡಕವಾಗಿದ್ದು ಅಧಿಕೃತವಾಗಿರುತ್ತದೆ. ಅರಿವಿನ ಮೊದಲ ಭಾಗವಾದಲ್ಲಿ ಮೂಲ ಬೋಧನೆಗಳನ್ನು ಕಲಿಯುವುದು ಆಗಿರುತ್ತದೆ. ಇನ್ನುಳಿದ ಎರಡು ಹೆಜ್ಜೆಗಳು **ಪಟಿಪತ್ತಿ** ಎಂದರೆ ಕಲಿತದ್ದನ್ನು ದಿನನಿತ್ಯ ಸಾಧನೆಗೆ ಹಚ್ಚುವುದು; ಇನ್ನು **ಪಟಿವೇಧ** ಎಂದರೆ ಕಲಿತದ್ದನ್ನು ಮತ್ತು ಸಾಧನೆಯನ್ನು ಅನುಭವಕ್ಕೆ ಹಚ್ಚಿ ಚತುರಾರ್ಯ ಸತ್ಯಗಳ ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಆಗಿರುತ್ತದೆ. ಎಂದರೆ ಈ ಸಾಕ್ಷಾತ್ಕಾರವು ನೇರ ಅನುಭವ ಮತ್ತು ಜ್ಞಾನ ಸಾಧನೆಗಳ ಫಲವೇ ಆಗಿರುತ್ತದೆ.

ಧಮ್ಮ-ವಿನಯಗಳ ವರ್ಗೀಕರಣದಲ್ಲಿ ಧಮ್ಮವು ಜನಪ್ರಿಯ ಹಾಗು ಉನ್ನತ ಬೋಧೆಗಳನ್ನು ಎಂದರೆ ಸುತ್ತ ಮತ್ತು ಅಭಿಧಮ್ಮಗಳನ್ನು ಒಳಗೊಂಡಿರುತ್ತದೆ; ವಿನಯದಲ್ಲಿ ಬೌದ್ಧ ಭಿಕ್ಷುಗಳು ಅನುಸರಿಸಬೇಕಾದ ಶಿಸ್ತು ಒಳಗೊಂಡಿರುತ್ತದೆ. ಬುದ್ಧನು ೮೪,೦೦೦ ಧಮ್ಮಕ್ಖಂದಾಗಳನ್ನು ಬೋಧಿಸಿದ್ದು, ಇವು ಎಲ್ಲ ಜನರ ಎಲ್ಲರೀತಿಯ ಮನೋಧರ್ಮದವರಿಗೆ ಬೇಕಾದ ಉಪದೇಶಗಳ ಮೊತ್ತವಾಗಿವೆ. ಇನ್ನು ಮೂರನೆಯ ವರ್ಗೀಕರಣವೆಂದರೆ ತಿಪಿಟಕ.

'ತಿಪಿಟಕ' ಬುಟ್ಟಿ ಎನ್ನುವುದು ಒಂದು ಅಲಂಕರಿಕ ಪ್ರಯೋಗ. ಅದು ಉಳಿಸಿಕೊಳ್ಳುತ್ತದೆ, ಹಿಡಿದುಕೊಳ್ಳುತ್ತದೆ ಮತ್ತು ವರ್ಗಾಯಿಸುತ್ತದೆ. ಈ ೮೪,೦೦೦ ಧಮ್ಮೋಪದೇಶಗಳು ಈ ಮೂರು ಬುಟ್ಟಿಗಳಲ್ಲಿ ಸಂರಕ್ಷಿಸಲ್ಪಟ್ಟಿದ್ದು, ಬೋಧನೆಗಳನ್ನು ಸಂನ್ಯಾಸಿ ಧರ್ಮದ ಶಿಸ್ತುಗಳನ್ನು ಮತ್ತು ಉನ್ನತ ಸ್ತರದ ಧರ್ಮ ಸೂಕ್ಷ್ಮಗಳನ್ನು ಒಳಗೊಂಡ ಅಭಿಧಮ್ಮವು ಸಾಮಾನ್ಯ ಬೋಧನೆಗಳಿಗಿಂತ ಭಿನ್ನವಾಗಿದ್ದು ಇವೆಲ್ಲವೂ ಮುಂದಿನ ಸಂತತಿಯ ಒಳಿತಿಗಾಗಿ ಇವೆ. ಹಾಗೆಯೇ ಈ ಮೂರು ಬುಟ್ಟಿಗಳು ದಿನನಿತ್ಯ ಸಾಧನೆಗಾಗಿ ಧಮ್ಮವನ್ನು ಉಳಿಸಿಕೊಂಡು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಗುರು-ಶಿಷ್ಯ ಪರಂಪರೆಯ ಮೂಲಕ ವರ್ಗಾಯಿಸುತ್ತಿವೆ. ಹೀಗೆ ಜ್ಞಾನ, ಸಾಧನೆ ಮತ್ತು ಸಾಕ್ಷಾತ್ಕಾರಗಳು ನಿರಂತರವಾಗಿ ಮುಂದುವರಿಯಬೇಕು ಮತ್ತು ಸುರಕ್ಷಿತವಾಗಬೇಕು 'ಬಹುಜನ ಹಿತಕ್ಕಾಗಿ, ಬಹುಜನ ಸುಖಕ್ಕಾಗಿ'. ತಿಪಿಟಕದ ಪವಿತ್ರ ಅಂತರಾಳವೇ ಇದು. ತಿಪಿಟಕಗಳನ್ನು ಮತ್ತು ಇತರ ಪಾಳಿ ಸಾಹಿತ್ಯಗಳನ್ನು ವಿಭಜಿಸಿದಾಗ ಈ ವಿವರಗಳನ್ನು ಕಾಣಬಹುದು:

೧. **ವಿನಯಪಿಟಕ :** ಸಂನ್ಯಾಸಿ ಧರ್ಮದ ಶಿಸ್ತಿನ ನಿಯಮಗಳು ಇವುಗಳಲ್ಲಿದ್ದು ಇದರಲ್ಲಿ ಐದು ವಿಭಾಗಗಳಿವೆ:

i) **ಪಾರಾಜಿಕ** ಮತ್ತು ii) **ಪಾಚಿತ್ತಿಯ**-ಇವೆರಡನ್ನೂ ವಿಭಂಗಗಳು ಎಂದು ಕರೆಯುತ್ತಾರೆ. ಸಂನ್ಯಾಸಿ ಧರ್ಮದ ಶಿಸ್ತುಗಳನ್ನು ಉಲ್ಲಂಘಿಸಿದ ಅವನ್ನು ನಿಯಂತ್ರಿಸುವ ಶಿಸ್ತಿನ ನಿಯಮಗಳು ಇಲ್ಲಿವೆ.

iii) **ಮಹಾಮಗ್ಗ** ಮತ್ತು iv) **ಚೂಲವಗ್ಗ**-ಇವುಗಳನ್ನು ಖಂದಕಗಳೆಂದೂ ಕರೆಯುತ್ತಾರೆ. ಇದು ವಿಭಂಗಕ್ಕೆ ಸಮಾನವಾದ ಇನ್ನೊಂದು ಭಾಗ. ವಿಭಂಗದಲ್ಲಿ ಉಲ್ಲಂಘನೆಯಾದ ಸಂದರ್ಭದಲ್ಲಿ ಹೊರಹಾಕುವ, ಮರು ಸೇರಿಸಿಕೊಳ್ಳುವ ಶಿಸ್ತುಕ್ರಮ ಜರುಗಿಸುವ ವಿಧಾನಗಳು ವಿನಯಕಮ್ಮದಲ್ಲಿ ಬಂದು ಸಂನ್ಯಾಸಿ ಬದುಕನ್ನು ನಿಯಂತ್ರಿಸುವ ಸೂತ್ರಗಳು ಇವೆ. ಖಂದಕದಲ್ಲಿ ಬೋಧಿಜ್ಞಾನ ಪಡೆದುದು, ಜ್ಞಾನೋದಯದ ನಂತರ ಬುದ್ಧರು ನೀಡಿದ ಬೋಧನೆಗಳು, ಸಂಘ ಸ್ಥಾಪನೆಯಗುವವರೆಗೆ ಇರುವ ಚಾರಿತ್ರಿಕ ಘಟನೆಗಳ ದಾಖಲೆಗಳು ಇವೆ. v) **ಪರಿವಾರ**-ಇದು ಸೂಚನೆಗಳ ಮತ್ತು ಚಾರಿತ್ರಿಕ ವಿವರಗಳ ಕೈಪಿಡಿ.

**2. ಸುತ್ತಪಿಟಕ**-ಇದು ಧಮ್ಮೋಪದೇಶಗಳ ಸಂಗ್ರಹ. ಇದರಲ್ಲಿ ಐದು ಪ್ರಮುಖ ವಿಭಾಗಗಳಿವೆ: i) **ದೀಘನಿಕಾಯ**-೩೪ ದೀರ್ಘ ಉಪದೇಶಗಳನ್ನು ಒಳಗೊಂಡಿದೆ. ಹಲವಾರು ಸಂದರ್ಭಗಳಲ್ಲಿ ಬುದ್ಧನು ರಾತ್ರಿ ಇಡೀ ಬಹುಜನಸ್ತೋಮದ ಮುಂದೆ ಉಪದೇಶ ನೀಡಿದನು. ii) **ಮಜ್ಝಿಮನಿಕಾಯ**-ಅಷ್ಟು ದೀರ್ಘವಲ್ಲದ ೧೫೨ ಉಪದೇಶಗಳು; ಐವತ್ತು ಸುತ್ತಗಳಿಗೆ ಒಂದರಂತೆ ಮೂರು ಭಾಗಗಳಲ್ಲಿವೆ. ಮೂರನೇ ಭಾಗದಲ್ಲಿ ೫೨ ಸುತ್ತಗಳಿವೆ. iii) **ಸಂಯುತ್ತನಿಕಾಯ**-ಇದರಲ್ಲಿ ೭೭೬೨ ಉಪದೇಶಗಳು ದೀರ್ಘ-ಮಧ್ಯಮ ರೂಪದ ಸಂಗ್ರಹವಾಗಿದ್ದು, ಐದು ಪ್ರಧಾನ ವಿಭಾಗಗಳಲ್ಲಿವೆ. ಈ ಉಪದೇಶಗಳನ್ನು ವಿಷಯವಾರು ವಿಂಗಡಣೆ ಮಾಡ ಲಾಗಿದೆ. v) **ಅಂಗುತ್ತರ ನಿಕಾಯ**-ಇದರಲ್ಲಿ ಉಪದೇಶಗಳನ್ನು ಸಂಖ್ಯಾವಾರು ವ್ಯವಸ್ಥೆಗೊಳಿಸಿದ್ದು ೯೫೫೭ ಚಿಕ್ಕ ಉಪದೇಶಗಳು ಎರಡು

ಭಾಗಗಳಲ್ಲಿವೆ; **ನಿಪಾತ**–ಇದರಲ್ಲಿ ಸಂಖ್ಯಾವಾರು ಗುಂಪು ಮಾಡಲಾಗಿದೆ. ಉದಾ: ಒಂದು, ಎರಡು, ಮೂರು ಇತ್ಯಾದಿ. ಇದು ಬೌದ್ಧ ಮನಃಶಾಸ್ತ್ರ ಮತ್ತು ಆಧ್ಯಾತ್ಮಿಕ ಉಪದೇಶಗಳ ಗಂಭೀರ ಅಧ್ಯಯನಕ್ಕೆ ಬೇಕಾದ ಸಂಪನ್ಮೂಲ ಅಥವಾ ಆಕರ ಗ್ರಂಥ. vi) ಖುದ್ದಕ ನಿಕಾಯ–ಬಹು ಸಂಖ್ಯೆಯ ಮುಖ್ಯ ಗ್ರಂಥಗಳ ಸಂಪೂರ್ಣ ಸಂಗ್ರಹವಿದು. ಇದರಲ್ಲಿ ಹದಿನೆಂಟು ಮುಖ್ಯ ಗ್ರಂಥಗಳಿವೆ. ಪಟ್ಟಿ ಈ ಕೆಳಗಿನಂತೆ ಇದೆ:

೧) ಖುದ್ಧಕ ಪಾಠ (ಸಮಗ್ರ ಕೈಪಿಡಿ)
೨) ಧಮ್ಮಪದ (ಧಮ್ಮದ ಮಾತುಗಳು)
೩) ಉದಾನ (ಉದಾತ್ತ ಮಾತುಗಳು)
೪) ಇತಿವುತ್ಥಕ ('ಬುದ್ಧ ಹೀಗೆ ಹೇಳಿದನು' ಎನ್ನುವಂತಹ ಕೃತಿ)
೫) ಸುತ್ತನಿಪಾತ (ಪ್ರಮುಖವಾದ ಉಪನ್ಯಾಸಗಳ ಗ್ರಂಥ)
೬) ವಿಮಾನವತ್ಥು (ದಿವ್ಯ ಭವನಗಳು, ದಿವ್ಯ ವಸ್ತುಗಳು)
೭) ಪೇತವತ್ಥು (ಗತಿಸಿಹೋದವರ ಅಥವಾ ಪ್ರೇತಗಳ ಕಥೆಗಳು)
೮) ಥೇರಗಾಥಾ (ಹಿರಿಯ ಭಿಕ್ಖುಗಳ ಗಾಥೆಗಳು)
೯) ಥೇರಿಗಾಥಾ (ಹಿರಿಯ ಭಿಕ್ಷುಣಿಯರ ಗಾಥೆಗಳು)
೧೦) ಜಾತಕ (ಬುದ್ಧನ ಹಿಂದಿನ ಜನ್ಮದ ಕಥೆಗಳು)
೧೧) ನಿದ್ದೇಸ (ವಿವರಣೆ)
೧೨) ಪಟಿಸಂಭಿದಾ ಮಗ್ಗ (ವಿಶ್ಲೇಷಣಾತ್ಮಕ ಮಾರ್ಗ)
೧೩) ಅಪಾದಾನ (ಜೀವನ ಚರಿತ್ರಾ ಗ್ರಂಥಗಳು)
೧೪) ಬುದ್ಧವಂಸ (ಬುದ್ಧ ಚರಿತ್ರೆ)
೧೫) ಚರಿಯಾಪಿಟಕ (ಬುದ್ಧ ಗೌತಮನ ಹಿಂದಿನ ಜನ್ಮಗಳು)
೧೬) ನೇತ್ತಿಪಕರಣ (ವ್ಯಾಖ್ಯಾನ ಗ್ರಂಥ)
೧೭) ಪೇತಕೋಪದೇಶ (ವೈಧಾನಿಕ ಶಾಸ್ತ್ರ ಗ್ರಂಥ)
೧೮) ಮಿಲಿಂದ ಪನ್ಹ (ಮಿಲಿಂದನ ಪ್ರಶ್ನೆಗಳು)

1. **ಅಭಿಧಮ್ಮ ಪಿಟಕ** (ಉನ್ನತೋಪದೇಶಗಳ ಸಂಗ್ರಹ, ಇದರಲ್ಲಿ ಏಳು ಗ್ರಂಥಗಳಿವೆ:
   ೧. ಧಮ್ಮಸಂಗನಿ (ಗೋಚರ ಸಂಗತಿಗಳ (ಧರ್ಮಗಳ) ಪುಸ್ತಕ
   ೨. ವಿಭಂಗ (ವಿಮರ್ಶಾ ಗ್ರಂಥ)
   ೩. ಧಾತುಕಥಾ (ಧಾತುಗಳ ಮೇಲಿನ ಗ್ರಂಥ)
   ೪. ಪುಗ್ಗಲಪಟ್ಟತ್ತಿ (ವಿವಿಧಬಗೆಯ ಮನುಷ್ಯರ ಪುಸ್ತಕ)
   ೫. ಕಥಾವತ್ತು (ವಿವಾದಗಳ ಪುಸ್ತಕ)
   ೬. ಯಮಕ (ಜೋಡಿಗಳ ಪುಸ್ತಕ)
   ೭. ಪಟ್ಠಾನ (ಸಂಬಂಧಗಳ ಪುಸ್ತಕ)

**ತಿಪಿಟಕ ಪಾಲಿ ಗ್ರಂಥಗಳ ಪರಂಪರೆ ಹೀಗಿದೆ:**

1. **ತಿಪಿಟಕ**
   ಅ. **ವಿನಯ ಪಿಟಕ**
      ೧. ಪಾರಾಜಿಕ
      ೨. ಪಾಚಿತ್ತಿಯ
      ೩. ಮಹಾವಗ್ಗ

೪. ಚೂಲವಗ್ಗ

೫. ಪರಿವಾರ

ಆ. **ಸುತ್ತಪಿಟಕ**

೧. ದೀಘ ನಿಕಾಯ

೨. ಮಜ್ಝಿಮ ನಿಕಾಯ

೩. ಸಂಯುತ್ತ ನಿಕಾಯ

೪. ಅಂಗುತ್ತರ ನಿಕಾಯ

೫. ಖುದ್ದಕ ನಿಕಾಯ

**ಖುದ್ದಕ ನಿಕಾಯದ ಅಡಿ ಬರುವ ಗ್ರಂಥಗಳು**

೧) ಖುದ್ದಕ ಪಾಠ

೨) ಧಮ್ಮಪದ

೩) ಉದಾನ

೪) ಇತಿವುತ್ಥಕ

೫) ಸುತ್ತನಿಪಾತ

೬) ವಿಮಾನವತ್ಥು

೭) ಪೇತವತ್ಥು

೮) ಥೇರಗಾಥಾ

೯) ಥೇರಿಗಾಥಾ

೧೦) ಅಪದಾನ

೧೧) ಬುದ್ಧವಂಸ

೧೨) ಚರಿಯಾಪಿಟಕ

೧೩) ಜಾತಕ

೧೪) ನಿದ್ದೇಸ

೧೫) ಪಟಿಸಂಭಿದ ಮಗ್ಗ

೧೬) ನೇತ್ತಿಪಕರಣ

೧೭) ಪೇತಕೋಪದೇಸ

೧೮) ಮಿಲಿಂದ ಪನ್ಹ

ಇ. **ಅಭಿಧಮ್ಮ ಪಿಟಕ**

೧. ಧಮ್ಮಸಂಗನಿ

೨. ವಿಭಂಗ

೩. ಧಾತುಕಥಾ

೪. ಪುಗ್ಗಲಪುಞ್ಞತ್ತಿ

೫. ಕಥಾವತ್ಥು

೬. ಯಮಕ

೭. ಪಟ್ಠಾಣ

## II. ಅಟ್ಠಕಥಾ ಸಾಹಿತ್ಯ

### ಅ. ವಿನಯ ಪಿಟಕ ಅಟ್ಠಕಥಾ (ಸಮಂತಪಾಸಾದಿಕ)

೧. ಪಾರಾಜಿಕ ಅಟ್ಠಕಥಾ

೨. ಪಾಚಿತಿಯ ಅಟ್ಠಕಥಾ

೩. ಮಹಾವಗ್ಗ ಅಟ್ಠಕಥಾ

೪. ಚೂಲವಗ್ಗ ಅಟ್ಠಕಥಾ

೫. ಪರಿವಾರ ಅಟ್ಠಕಥಾ

### ಆ. ಸುತ್ತಪಿಟಕ ಅಟ್ಠಕಥಾ

೧. ದೀಘ ನಿಕಾಯ ಅಟ್ಠಕಥಾ (ಸುಮಂಗಲವಿಲಾಸಿನಿ)

೨. ಮಜ್ಝಿಮ ನಿಕಾಯ ಅಟ್ಠಕಥಾ (ಪಪಂಚಸೂದನಿ)

೩. ಸಂಯುತ್ತ ನಿಕಾಯ ಅಟ್ಠಕಥಾ (ಸಾರತ್ಥಪ್ಪಕಾಸಿನಿ)

೪. ಅಂಗುತ್ತರ ನಿಕಾಯ ಅಟ್ಠಕಥಾ (ಮನೋರಥಪೂರಣಿ)

೫. ಖುದ್ದಕ ನಿಕಾಯದ ಮೇಲಿನ ಭಾಷ್ಯಗಳು ಹೀಗಿವೆ:

೧) ಖುದ್ದಕ ಪಾಠ ಅಟ್ಠಕಥಾ (ಪರಮತ್ಥ ಜ್ಯೋತಿಕಾ)

೨) ಧಮ್ಮಪದ ಅಟ್ಠಕಥಾ

೩) ಉದಾನ ಅಟ್ಠಕಥಾ (ಪರಮತ್ಥ ದೀಪಾನಿ)

೪) ಇತಿವುತ್ತಕ ಅಟ್ಠಕಥಾ (ಪರಮತ್ಥ ದೀಪಾನಿ)

೫) ಸುತ್ತನಿಪಾತ ಅಟ್ಠಕಥಾ(ಪರಮತ್ಥ ಜ್ಯೋತಿಕಾ)

೬) ವಿಮಾನವತ್ಥು ಅಟ್ಠಕಥಾ (ಪರಮತ್ಥ ದೀಪಾನಿ)

೭) ಪೇತವತ್ಥು ಅಟ್ಠಕಥಾ (ಪರಮತ್ಥ ದೀಪಾನಿ)

೮) ಥೇರಗಾಥಾ ಅಟ್ಠಕಥಾ (ಪರಮತ್ಥ ದೀಪಾನಿ)

೯) ಥೇರಿಗಾಥಾ ಅಟ್ಠಕಥಾ (ಪರಮತ್ಥ ದೀಪಾನಿ)

೧೦) ಅಪದಾನ ಅಟ್ಠಕಥಾ (ವಿಸುದ್ದಜನವಿಲಾಸಿನಿ)

೧೧) ಬುದ್ಧವಂಸ ಅಟ್ಠಕಥಾ (ಮಧುರತ್ಥವಿಲಾಸಿನಿ)

೧೨) ಚರಿಯಾಪಿಟಕ ಅಟ್ಠಕಥಾ (ಪರಮತ್ಥದೀಪಾನಿ)

೧೩) ಜಾತಕ ಅಟ್ಠಕಥಾ

೧೪) ಮಹಾ ನಿದ್ದೇಸ ಅಟ್ಠಕಥಾ (ಸದ್ಧಮ್ಮಪ್ಪಜ್ಜೋತಿಕಾ)

೧೫) ಚೂಲನಿದ್ದೇಸ ಅಟ್ಠಕಥಾ (ಸದ್ಧಮ್ಮಪ್ಪಜ್ಜೋತಿಕಾ)

೧೬) ಪಟಿಸಂಭಿದ ಮಗ್ಗ ಅಟ್ಠಕಥಾ (ಸದ್ಧಮ್ಮಪ್ಪಕಾಸಿನೀ)

೧೭) ನೇತ್ತಿಪಕರಣ ಅಟ್ಠಕಥಾ

೧೮) ಪೇತಕೋಪದೇಸ ಅಟ್ಠಕಥಾ

೧೯) ಮಿಲಿಂದ ಪನ್ಹ ಅಟ್ಠಕಥಾ (ಪರಮತ್ಥ ದೀಪಾನಿ)

### ಇ. ಅಭಿದಮ್ಮ ಪಿಟಕ ಅಟ್ಠಕಥಾ

೧. ಧಮ್ಮಸಂಗನಿ ಅಟ್ಠಕಥಾ (ಅಟ್ಠಸಾಲಿನಿ)

೨. ವಿಭಂಗ ಅಟ್ಠಕಥಾ (ಸಮ್ಮೋಭ ವಿನೋದಿನಿ)

೩. ಪಂಚಪ್ಪಕರಣ ಅಟ್ಠಕಥಾ (ಧಾತುಕಥಾ, ಪುಗ್ಗಲಪಞ್ಞತ್ತಿ, ಕಥಾವತ್ಥು, ಯಮಕ, ಪಟ್ಠಾಣಗಳ ಮೇಲಿನ ಅಟ್ಠಕಥಾ)

## III. ಟೀಕಾ ಸಾಹಿತ್ಯ

ಅ. ವಿನಯಪಿಟಕ ಟೀಕಾ

೧. ವಜಿರಾಬುದ್ಧಿ ಟೀಕಾ
೨. ಸಾರತ್ಥದೀಪಾನಿ ಟೀಕಾ
೩. ವಿಮತಿವಿನೋದಾನಿ ಟೀಕಾ
೪. ವಿನಯಾಲಂಕಾರ ಟೀಕಾ
೫. ಕಂಖಾವಿತರಣಿ ಪುರಾಣ ಟೀಕಾ
೬. ಕಂಖಾವಿತರಣಿ ಅಭಿನವ ಟೀಕಾ

**ಆ. ಸುತ್ತಪಿಟಕ ಟೀಕಾ**

೧. ದೀಘ ನಿಕಾಯ ಟೀಕಾ (ಲೀನತ್ಥಪ್ಪಕಾಸನಾ)
೨. ದೀಘ ನಿಕಾಯ ಸೀಲಕ್ಖಂದವಗ್ಗ ಅಭಿನವ ಟೀಕಾ (ಸಾಧುವಿಲಾಸಿನಿ)
೩. ಮಜ್ಝಿಮ ನಿಕಾಯ ಟೀಕಾ (ಲೀನತ್ಥಪ್ಪಕಾಸನ)
೪. ಸಂಯುತ್ತ ನಿಕಾಯ ಟೀಕಾ (ಲೀನತ್ಥಪ್ಪಕಾಸನ)
೫. ಅಂಗುತ್ತರ ನಿಕಾಯ ಟೀಕಾ (ಸಾರತ್ಥಮಂಜೂಷಿ)
೬. ನೇತ್ತಿಪ್ಪಕರಣ ಟೀಕಾ (ಲೀನತ್ಥಪ್ಪಕಾಸನಾ)
೭. ನೇತ್ತಿ ವಿಭಾವಿನಿ ಟೀಕಾ

**ಇ. ಅಭಿಧಮ್ಮಪಿಟಕ ಟೀಕಾ**

೧. ಧಮ್ಮಸಂಗಣಿ ಮೂಲ ಟೀಕಾ
೨. ಧಮ್ಮಸಂಗಣಿ ಅನು ಟೀಕಾ
೩. ವಿಭಂಗ ಮೂಲ ಟೀಕಾ
೪. ವಿಭಂಗ ಅನು ಟೀಕಾ
೫. ಪಂಚಪ್ಪಕರಣ ಮೂಲ ಟೀಕಾ
೬. ಪಂಚಪ್ಪಕರಣ ಅನು ಟೀಕಾ

**ಇತರೆ ಪ್ರಮುಖ ಪಾಲಿ ಕೃತಿಗಳು**

ವಿಸುದ್ಧಿ ಮಗ್ಗ

ಸಙ್ಗಾಯನ-ಪುಚ್ಛ ವಿಸ್ಸಜ್ಜನಾ

ದೀಘನಿಕಾಯ (ಪು-ವಿ)
ಮಜ್ಝಿಮನಿಕಾಯ (ಪು-ವಿ)
ಸಂಯುತ್ತನಿಕಾಯ (ಪು-ವಿ)
ಅಙ್ಗುತ್ತರನಿಕಾಯ (ಪು-ವಿ)
ವಿನಯಪಿಟಕ (ಪು-ವಿ)
ಅಭಿಧಮ್ಮಪಿಟಕ (ಪು-ವಿ)
ಅಟ್ಠಕಥಾ (ಪು-ವಿ)

ಚಾಣಕ್ಯನೀತಿ

ಪಕಿಣ್ಣಕ-ಗನ್ಥ-ಸಙ್ಗಹೋ

ರಸವಾಹಿನೀ

ಸೀಮವಿಸೋಧನೀಪಾಠ

ವೇಸ್ಸನ್ತರಗೀತಿ

ಸಿಂಹಳ-ಗನ್ಥ-ಸಙ್ಗಹೋ

ಮೋಗ್ಗಲ್ಲಾನ ವುತ್ತಿವಿವರಣಪಞ್ಚಿಕಾ

ಥೂಪವಂಸ

ದಾಠಾವಂಸ

ಧಾತುಪಾಠವಿಲಾಸಿನಿಯಾ

ಧಾತುವಂಸ

ಹತ್ಥವನಗಲ್ಲವಿಹಾರವಂಸ

ಜಿನಚರಿತಯ

ಜಿನವಂಸದೀಪಂ

ತೇಲಕಟಾಹಗಾಥಾ

ಮಿಲಿದಟೀಕಾ

ಪದಮಞ್ಜರೀ

ಸದ್ದಬಿನ್ದುಪಕರಣಂ

ಕಚ್ಚಾಯನಧಾತುಮಞ್ಜುಸಾ

ಸಾಮನ್ತಕೂಟವಣ್ಣನಾ

**ಇಂದು ಭಾರತದಲ್ಲಿನ ಬೌದ್ಧ ಧರ್ಮದ ಸ್ಥಿತಿ**

ಭಗವಾನ್ ಬುದ್ಧ ಯೂನಿವರ್ಸಿಟಿಯ ಉದ್ದೇಶವೆಂದರೆ ಭಗವಾನ್ ಬುದ್ಧರ ಧರ್ಮವನ್ನು ಅದು ಹುಟ್ಟಿದ ಭಾರತದಲ್ಲಿ ಮತ್ತೆ ಪ್ರತಿಷ್ಠಾಪಿಸುವುದು. ಈ ಕಾರ್ಯವನ್ನು ಆರ್ಯ ಬೋಧನೆಗಳನ್ನು ಪುನಃ ವಾಪಸ್ಸು ತರುವುದರ ಮೂಲಕ, ಪವಿತ್ರ ಗ್ರಂಥವಾದ ಪಾಳಿ ತಿಪಿಟಕಗಳಲ್ಲಿ ಪ್ರಸ್ತಾಪಿತವಾದ ಬುದ್ಧನ ಸದ್ಧಮ್ಮವನ್ನು ಜನರಿಗೆ ಉಣಬಡಿಸುವುದರ ಮೂಲಕ ಸಾಧಿಸಬಹುದು.

ನಿರಂತರವಾಗಿ ಬದಲಾಗುತ್ತಿರುವ ಈ ಬದುಕಿನಲ್ಲಿ ಅತ್ಯಂತ ಉತ್ಕೃಷ್ಟವಾದ ಸಂಗತಿಗಳೂ ನಾಶಕ್ಕೆ ಒಳಗಾಗುತ್ತವೆ. ಈ ಮಾತು ಜ್ಞಾನ ಖಣಿಯೇ ಆದ ಪಾಳಿ ತಿಪಿಟಕಗಳಿಗೂ ಅನ್ವಯಿಸುತ್ತದೆ. ಆದರೂ ಯಾವುದು ಕಳೆದುಹೋಗಿದೆಯೋ ಅದನ್ನು ಮರುಪಡೆಯಲು ಸಾಧ್ಯವಿದೆ. ಹೇಗೆ ರೋಗ ಹೋದಮೇಲೆ ಆರೋಗ್ಯ ಬರುವ ಹಾಗೆ.

ಪವಿತ್ರ ತ್ರಿರತ್ನಗಳಾದ ಬುದ್ಧರತ್ನ, ಧಮ್ಮರತ್ನ ಮತ್ತು ಸಂಘರತ್ನಗಳ ರಕ್ಷಣೆಯ ದೆಸೆಯಿಂದ ಭಾರತದಲ್ಲಿ ನಾವು ಭಾಗ್ಯಶಾಲಿಗಳೆಂದೇ ಎನ್ನಬೇಕು. ಕಾರಣ ನಮ್ಮ ಪವಿತ್ರ ಧಮ್ಮ ರತ್ನವಾದ ಪಾಳಿ ತಿಪಿಟಕಗಳು ಐತಿಹಾಸಿಕ ದುರ್ಘಟನೆಗಳಿಂದಾಗಿ ಭಾರತದಲ್ಲಿ ಮಾಯವಾದರೂ ನಮ್ಮ ಏಷಿಯಾದ ನೆರೆಹೊರೆಯವರಾದ ಶ್ರೀಲಂಕಾ, ಮ್ಯೆಯನ್ಮಾರ್, ಥಾಯ್‌ಲೆಂಡ್, ಕಾಂಬೋಡಿಯಾ ಮುಂತಾದ ದೇಶದವರು ಧಮ್ಮರತ್ನವನ್ನು ಅತ್ಯಂತ ಭಕ್ತಿ ಗೌರವಗಳಿಂದ ಕಾಪಾಡಿಕೊಂಡು ಉಳಿಸಿಕೊಂಡು ಬಂದಿದ್ದಾರೆ. ಈ ವಿಶಾಲ ಹೃದಯೀ ಏಶಿಯಾ ಖಂಡದ ಬೌದ್ಧ ದೇಶಗಳೇ ಪವಿತ್ರ ಪ್ರಪಂಚ ಧರ್ಮ ಬೌದ್ಧ ಧರ್ಮದ ತಾಯ್ನಾಡಾದ ಭಾರತದೊಂದಿಗೆ ವಾಣಿಜ್ಯ, ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಸಂಬಂಧಗಳನ್ನು ಬೆಳೆಸಿ ಸೌಹಾರ್ದತೆ ಮತ್ತು ಮೈತ್ರಿಗಳನ್ನು ಉಳಿಸಿಕೊಂಡು ಬಂದಿದೆ.

ಈ ಏಶಿಯಾ ಖಂಡದ ಬೌದ್ಧ ಧರ್ಮೀಯರು ಭಾರತದೊಂದಿಗೆ ಸೋದರ ಸಂಬಂಧವನ್ನಿಟ್ಟುಕೊಂಡು ಬೌದ್ಧ

ಲೇಡೀ ಸಯಾಡೋ ಗನ್ಥ-ಸಙ್ಗಹೋ
ಬುದ್ಧ-ವನ್ದನಾ ಗನ್ಥ-ಸಙ್ಗಹೋ
    ನಮಕ್ಕಾರಟೀಕಾ
    ಮಹಾಪಣಾಮಪಾಠ
    ಲಕ್ಖಣಾತೋ ಬುದ್ಧಥೋಮನಾಗಾಥಾ
    ಸುತವನ್ದನಾ
    ಕಮಲಾಞ್ಜಲಿ
    ಜಿನಾಲಙ್ಕಾರ
    ಪಜ್ಜಮಧು
    ಬುದ್ಧಗುಣಗಾಥಾವಲೀ
ವಂಸ-ಗನ್ಥ-ಸಙ್ಗಹೋ
    ಚೂಳಗನ್ಥವಂಸ
    ಮಹಾವಂಸ
    ಸಾಸನವಂಸ
ಬ್ಯಾಕರಣ ಗನ್ಥ-ಸಙ್ಗಹೋ
    ಕಚ್ಚಾಯನಬ್ಯಾಕರಣಂ
    ಮೋಗ್ಗಲ್ಲಾನಬ್ಯಾಕರಣಂ
    ಸದ್ದನೀತಿಪ್ಪಕರಣಂ (ಪದಮಾಲಾ)
    ಸದ್ದನೀತಿಪ್ಪಕರಣಂ (ಧಾತುಮಾಲಾ)
    ಪದರೂಪಸಿದ್ಧಿ
    ಮೋಗಲ್ಲಾನಪಞ್ಚಿಕಾ
    ಪಯೋಗಸಿದ್ಧಿಪಾಠ
    ವುತ್ತೋದಯಪಾಠ
    ಅಭಿಧಾನಪ್ಪದೀಪಿಕಾಪಾಠ
    ಸುಬೋಧಾಲಙ್ಕಾರಪಾಠ
    ಬಾಲಾವತಾರ ಗಣ್ಠಿಪದತ್ಥವಿನಿಚ್ಛಯಸಾರ
ನೀತಿ-ಗನ್ಥ-ಸಙ್ಗಹೋ
    ಲೋಕನೀತಿ
    ಸುತ್ತನ್ತನೀತಿ
    ಸೂರಸ್ಸತಿನೀತಿ
    ಮಹಾರಹನೀತಿ
    ಧಮ್ಮನೀತಿ
    ಕವಿದಪ್ಪಣನೀತಿ
    ನೀತಿಮಞ್ಜರೀ
    ನರದಕ್ಖದೀಪನೀ
    ಚತುರಾರಕ್ಖದೀಪನೀ

ಧರ್ಮದ ಅವನತಿಯ ಕಪ್ಪುಕಾಲದ ಉದ್ದಕ್ಕೂ ತೀರ್ಥಯಾತ್ರೆಗಳನ್ನು ಮಾಡಿದ್ದಾರೆ. ಈ ಮೈತ್ರಿ ಭಾವದಿಂದಾಗಿಯೇ ಎರಡೂ ಕಡೆಗಳಿಂದಲೂ ವಲಸೆ ಆರಂಭವಾಗಿ ಭಾರತೀಯ ಮತ್ತು ಏಶಿಯಾ ಬೌದ್ಧರು ಪರಸ್ಪರ ಭಿನ್ನ ದೇಶಗಳಲ್ಲಿ ನೆಲೆಯೂರತೊಡಗಿದರು.

ಹೀಗೆ ಇತಿಹಾಸವನ್ನು ನೋಡಿದರೆ ಚೈನಾದ ಯೂನಾನ್ ಪ್ರಾಂತ್ಯದ ತಾಯ್ ಪಂಗಡದವರು ಬರ್ಮಾದ ಶಾನ್ ಪ್ರಾಂತ್ಯಕ್ಕೆ ವಲಸೆ ಬಂದು ನಿವಾಸಿಗಳಾದರು. ಅಲ್ಲಿಂದ ಅವರು ಭಾರತದ ಈಶಾನ್ಯ ರಾಜ್ಯಗಳಾದ ಅಸ್ಸಾಂ, ಅರುಣಾಚಲಪ್ರದೇಶ, ಮಣಿಪುರ, ತ್ರಿಪುರ, ಮಿಜೋರಾಮ್‌ನ ಈಗಿನ ಚಿತಗಾಂಗ್ (ಈಗ ಬಾಂಗ್ಲಾ ದೇಶದಲ್ಲಿದೆ) ಅರಕನ ಪ್ರದೇಶದವರೆಗೆ ವಲಸೆಬಂದರು. ಈ ವಲಸೆ ಬಂದ ಜನರೆಲ್ಲರೂ ಬೌದ್ಧರೇ. ಬೇರೆ ಪ್ರದೇಶಗಳಲ್ಲಿ ಬೌದ್ಧ ಧರ್ಮವು ಮಾಯವಾಗಿದ್ದರೆ ಈ ಬೌದ್ಧರು (ಅವರನ್ನು ಪರಿಶಿಷ್ಟ ಪಂಗಡದವರೆಂದು ಕರೆಯುತ್ತಿದ್ದಾರೆ). ಧಮ್ಮದ ಪರಿಯತ್ತಿ–ಜ್ಞಾನ, ಪಟಿಪತ್ತಿ–ಸಾಧನೆಯನ್ನು ಶ್ರದ್ಧೆಯಿಂದ ಮಾಡುತ್ತಿದ್ದಾರೆ. ಈ ಅರ್ಥದಲ್ಲಿ ಹೇಳುವುದಾದರೆ ಬೌದ್ಧ ಧರ್ಮವನ್ನು ಎಂದೂ ಹೊರದೂಡಲಿಲ್ಲ ಅಥವಾ ಅದು ಇನ್ನೊಂದು ಪ್ರದೇಶದಲ್ಲಿ ಸಾರಾಸಗಟಾಗಿ ಸ್ವೀಕೃತವಾಯಿತು ಎಂದು ಯಾವ ಜಾತಿವಾದಿಗಳು ಹೇಳುತ್ತಾರೊ ಅದು ಸಂಪೂರ್ಣ ಸುಳ್ಳೆಂದು ಈಗ ಸಾಬೀತಾಗುತ್ತದೆ.

ಭಾರತದ ಈಶಾನ್ಯ ರಾಜ್ಯಗಳಲ್ಲಿ ಬೌದ್ಧ ಗುಡ್ಡಗಾಡು ಸಮುದಾಯದವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅವರಲ್ಲೇ ಹಲವಾರು ಗುಂಪುಗಳಿವೆ. ಮ್ಯೆಯನ್ಮಾರ್, ಮಾಗ್, ಚಕ್ಮಿ, ಕಮ್‌ತಿ, ಸಿಂಘ್‌ಪೋ, ಫಾಕೆ, ಮಾನ್, ಸ್ಯೆಯಾಂ, ಇಟೊನ್, ತುರುಂಗ್ ಮತ್ತು ಹಲವಾರು. ಮೂಲತಃ ಶಾಂತಿಪ್ರಿಯರಾದ ಈ ಬೌದ್ಧ ಗುಡ್ಡಗಾಡು ಜನಾಂಗದವರು ಇತರೆ ಜಾತಿಯವರೊಂದಿಗೆ ಮತ್ತು ಧರ್ಮಗಳೊಂದಿಗೆ ತುಂಬ ಸೌಹಾರ್ದತೆಯಿಂದ ಬದುಕುತ್ತಿದ್ದಾರೆ.

ಇನ್ನು ಹೊಸ ಸಂಪ್ರದಾಯಗಳಿಗೆ ಸೇರಿದ ಬೌದ್ಧರಿದ್ದಾರೆ. ಉತ್ತರ ಬೌದ್ಧ ಪಂಥದವರು ಉದಾ: ಮಹಾಯಾನ, ಇತ್ಯಾದಿ. ಈ ಸಮುದಾಯಕ್ಕೆ ಸೇರಿದ ಜನ ಲಡಾಕ್, ಸಿಕ್ಕಿಂ, ಉತ್ತರಾಖಂಡ, ಹಿಮಾಚಲ ಪ್ರದೇಶ್, ಮೊನ್‌ಪ, ನೇಪಾಲ, ಅರುಣಾಚಲ ಪ್ರದೇಶ ಈ ಪ್ರಾಂತ್ಯಗಳಲ್ಲಿ ಚೆನ್ನಾಗಿಯೇ ನೆಲೆಸಿದ್ದಾರೆ. ಇವರು ಥೇರವಾದ ಅಥವಾ ದಕ್ಷಿಣ ಬೌದ್ಧ ಸಮುದಾಯದವರಿಗಿಂತಲೂ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಮುಂದಿದ್ದಾರೆ. ಮಹಾಯಾನ ಮತ್ತು ವಜ್ರಯಾನದವರು ನಡೆಸುತ್ತಿರುವ ಬಹುಸಂಖ್ಯೆಯ ಶಾಲಾ ಕಾಲೇಜು ವಿಶ್ವವಿದ್ಯಾಲಯಗಳನ್ನು ನೋಡಿದರೆ ಶೈಕ್ಷಣಿಕ ಅಭಿವೃದ್ಧಿ ಅಲ್ಲಿ ತುಂಬಾ ಆಗಿದೆ ಎಂದು ತಿಳಿದುಬರುತ್ತದೆ. ಮಹಾಯಾನ ಮತ್ತು ವಜ್ರಯಾನ ಸಂಸ್ಥೆಗಳು ತುಂಬಾ ಇದ್ದರೂ ಭಗವಾನ್ ಬುದ್ಧ ಯೂನಿವರ್ಸಿಟಿ ಆಫ್ ಪಾಳಿ ಅಂಡ್ ಥೇರವಾದ ಬುದ್ಧಿಸಂ ಇಡೀ ಭಾರತದಲ್ಲಿ ಒಂದೇ ಆಗಿದ್ದು ಥೇರವಾದಕ್ಕೆ ಮೀಸಲಾಗಿದೆ. ನಮ್ಮ ಭಗವಾನ್ ಬುದ್ಧ ವಿಶ್ವವಿದ್ಯಾನಿಲಯದಡಿ ಪಾಲಿ ತಿಪಿಟಕ, ಅಟ್ಠಕಥಾ, ಟೀಕಾ ಮತ್ತು ಇತರ ಪಾಲಿ ಕೃತಿಗಳನ್ನು ಭಾರತದ ಭಾಷೆಗಳಲ್ಲಿ ಅನುವಾದಿಸುವುದು, ಹಾಗೆಯೇ ಜಗತ್ತಿನ ಇತರ ಭಾಷೆಗಳಿಗೆ ಅನುವಾದಿಸುವ ಗುರಿಯನ್ನು ಹೊಂದಿದ್ದೇವೆ. ಈ ಐತಿಹಾಸಿಕ ಬೃಹತ್ ಕಾರ್ಯಕ್ಕೆ ತ್ಯಾಗಮಯಿ, ಶೀಲಮಯಿ ಮತ್ತು ಧಮ್ಮದಲ್ಲಿ ಆನಂದ ಕಾಣುವವರು ಹೆಚ್ಚು ಹೆಚ್ಚು ಜನರ ಪಾಲ್ಗೊಳ್ಳುವಿಕೆ ಬೇಕಾಗಿದೆ. ಈ ಮಹತ್ಕಾರ್ಯ ಸುಗಮವಾಗಿ ನಡೆಯಲೆಂದು ಆಶಿಸುತ್ತೇನೆ.

**– ಪರಮ ಪೂಜ್ಯ ಡಾ॥ ಆಚಾರ್ಯ ಬುದ್ಧರಕ್ಖಿತ ಮಹಾಥೇರ**
ಸಂಸ್ಥಾಪಕ ಸಂಪಾದಕರು

# ಕನ್ನಡ ತಿಪಿಟಕ ಕೈಪಿಡಿ – A Handbook of Kannada Tipitaka

| Sl. No | List of Published Kannada Tipitaka Books | |
|---|---|---|
| 1 | **Dighanikaya– 1**<br>Editor: Most Ven. AcharyaBuddharakkhita<br>Name of the Author: H V Srirangaraju<br>Year of Publication: 2011 |  |
| 2 | **DighaNikaya– 2**<br>Editor: Most Ven. AcharyaBuddharakkhita<br>Name of the Author: Dr. Mudnakudu Chinnaswamy<br>Year of Publication: 2012 |  |
| 3 | **DighaNikaya– 3**<br>Editor: Most Ven. AcharyaBuddharakkhita<br>Name of the Author: Molakalmur Srinivasmurthy<br>Year of Publication: 2012 |  |
| 4 | **Majj himanikaya– 1**<br>Editor: Most Ven. AcharyaBuddharakkhita<br>Name of the Author: Dr. J Srinivasmurthy<br>Year of Publication: 2012 |  |

| | | |
|---|---|---|
| **5** | **Majjhimanikaya– 2**<br>Editor: Most Ven. AcharyaBuddharakkhita<br>Name of the Author: Dr. B V Rajaram<br>Year of Publication: 2012 |  |
| **6** | **Majjhimanikaya– 3**<br>Editor: Most Ven. Acharya Buddharakkhita<br>Name of the Author: Dr. B V Rajaram<br>Year of Publication: 2011 |  |
| **7** | **Majjhimanikaya– 4**<br>Editor: Most Ven. Acharya Buddharakkhita<br>Name of the Author: Molakalmuru Srinivasmurthy<br>Year of Publication: 2011 |  |
| **8** | **Majjhimanikaya– 5**<br>Editor: Most Ven. Acharya Buddharakkhita<br>Name of the Author: Molakalmuru Srinivasmurthy<br>Year of Publication: 2014 |  |
| **9** | **Majjhimanikaya– 6**<br>Editor: Most Ven. Acharya Buddharakkhita<br>Name of the Author: S Narasimhaiah<br>Year of Publication: 2015 |  |

| | | |
|---|---|---|
| **10** | **Samyuttanikaya1 (Sagatavagga)**<br>Editor: Most Ven. Acharya Buddharakkhita<br>Name of the Author: Molakalmuru Srinivasmurthy<br>Year of Publication: 2016 |  |
| **11** | **Samyuttanikaya2 (Nidanasamyutta)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Mohan Habbu<br>Year of Publication: 2017 |  |
| **12** | Samyuttanikaya -3 **(Khandavagga)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Ramachandra S Habbu<br>Year of Publication: 2018 |  |
| **13** | **Samyuttanikaya- 4 (Salayatana Vagga)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Aneesh Bodh<br>Year of Publication: 2017 |  |

| | | |
|---|---|---|
| 14 | **Samyuttanikaya-Mahavagga- part – 1**<br>Editor: Ven. Kassapa Mahathera<br>& Ven. Ananda Bhanteji<br>Name of the Author: Dr. Parashuramappa<br>Year of Publication: 2022 |  |
| 15 | **Samyuttanikaya Mahavagga Part – 2**<br>Editor: Ven. Kassapa Mahathera<br>& Ven. Ananda Bhanteji<br>Name of the Author: Molakalmuru Srinivasamurthy<br>Year of Publication: 2020 |  |
| 16 | **Anguttaranikaya-1 (Adana Sankyatmaka Nikaya)**<br>Editor: Ven. Kassapa Mahathera<br>& Ven. Ananda Bhanteji<br>Name of the Author: S. Narasimhaiah<br>Year of Publication: 2018 |  |
| 17 | **Anguttaranikaya-2 (Adana SankyatmakaNikaya**<br>Editor: Ven. Kassapa Mahathera<br>& Ven. Ananda Bhanteji<br>Name of the Author: S. Narasimhaiah<br>Year of Publication: 2018 |  |

| | | | |
|---|---|---|---|
| **18** | **Anguttaranikaya-3 (TikanipataPali)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Uday Kumar Habbu<br>Year of Publication: 2017 | |  |
| **19** | **Anguttaranikaya-4 (ChatuttanipataPali)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Arun Kumar Habbu<br>Year of Publication: 2017 | |  |
| **20** | **Anguttaranikaya-5 (Panchakanipata)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Muniyal Ganesh Shenoy<br>Year of Publication: 2017 | |  |
| **21** | **Anguttaranikaya-6 (CakkanipataPali)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Molakalmuru Srinivasmurthy<br>Year of Publication: 2017 | |  |

| | | |
|---|---|---|
| **22** | **Anguttaranikaya-7 (SuttakanipataPali)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Molakalmuru Srinivasmurthy<br>Year of Publication: 2018 |  |
| **23** | **Anguttaranikaya-10 (SuttakanipataPali)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Mudnakudu Chinnaswamy<br>Year of Publication: 2019 |  |
| **24** | **Kuddakanikaya-1 (Kuddakapata, Dhammapada, Udaana and Itivuttaka**<br>Editor: Ven. Kassapa Mahathera<br>& Ven. Ananda Bhanteji<br>Name of the Author: H V Srirangaraju<br>Year of Publication: 2012 |  |
| **25** | **Kuddakanikaya-2 (Suttanipata)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Aneesh Bodh<br>Year of Publication: 2014 |  |

| | | |
|---|---|---|
| 26 | **Milinda Panha-1 (Suttapitaka– Kuddakanikaya)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Aneesh Bodh<br>Year of Publication: 2015 |  |
| 27 | **MilindaPanha-2 (Suttapitaka– Kuddakanikaya)**<br>Editor: Ven. Kassapa Mahathera<br>& Ven. Ananda Bhanteji<br>Name of the Author: Aneesh Bodh<br>Year of Publication: 2015 |  |
| 28 | **Jataka Stories- 1**<br>Editor: Ven. Acharya Buddharakkhita<br>Name of the Author: Dr. B N Chandraiah<br>Year of Publication: 2014 |  |
| 29 | **Jataka Stories- 2**<br>Editor: Ven. Acharya Buddharakkhita<br>Name of the Author: Dr. B N Chandraiah<br>Year of Publication:2011 |  |

| | | |
|---|---|---|
| **30** | **Jataka Stories 3**<br>Editor: Ven. Acharya Buddharakkhita<br>Name of the Author: Dr. B N Chandraiah<br>Year of Publication: 2011 |  |
| **31** | **Jataka Stories 4**<br>Editor: Ven. Acharya Buddharakkhita<br>Name of the Author: Dr. B N Chandraiah<br>Year of Publication: 2011 |  |
| **32** | **Jataka Stories 5**<br>Editor: Ven. Acharya Buddharakkhita<br>Name of the Author: Dr. B N Chandraiah<br>Year of Publication: 2011 |  |